# ಘಟಕ–16 ಕ್ಷೇತ್ರಾಡಳಿತ

**ಸಂರಚನೆ**

16.0 ಉದ್ದೇಶಗಳು

16.1 ಪೀಠಿಕೆ

16.2 ಪ್ರಾದೇಶಿಕ ಆಡಳಿತ

16.3 ವಿಭಾಗೀಯ ಆಡಳಿತ

16.4 ಜಿಲ್ಲಾಡಳಿತದ ವಿಕಾಸ

16.5 ಪ್ರಾದೇಶಿಕ ಉಪ ವಿಭಾಗಗಳು

16.6 ಕಲೆಕ್ಟರ್ ಮತ್ತು ಜಿಲ್ಲಾಡಳಿತ

16.7 ಜಿಲ್ಲಾಡಳಿತದ ಆಂಶಿಕ ಭಾಗಗಳು

16.8 ಆಡಳಿತಾತ್ಮಕ ವ್ಯವಸ್ಥೆ

16.9 ಕ್ಷೇತ್ರಾಡಳಿತದಲ್ಲಿನ ಸಮಸ್ಯಾತ್ಮಕ ಪ್ರದೇಶಗಳು

16.10 ಸಾರಾಂಶವನ್ನು ತಿಳಿಯೋಣ

16.11 ಪ್ರಮುಖ ಪದಗಳು

16.12 ಉಲ್ಲೇಖಗಳು ಮತ್ತು ಹೆಚ್ಚಿನ ಓದಿಕೆಗಳು

16.13 ನಿಮ್ಮ ಪ್ರಗತಿಯ ನಿಟ್ಟಿನ ಅಭ್ಯಾಸಗಳನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು

## 16.0 ಉದ್ದೇಶಗಳು

ಈ ಘಟಕವನ್ನು ಅಭ್ಯಾಸ ಮಾಡಿದ ನಂತರ:

- ಭಾರತದಲ್ಲಿ ಕ್ಷೇತ್ರಾಡಳಿತದ ಮಹತ್ವವನ್ನು ವರ್ಣಿಸಲು;
- ಕ್ಷೇತ್ರಾಡಳಿತ ಮತ್ತು ಪ್ರಾದೇಶಿಕ ಆಡಳಿತದ ಅರ್ಥ ಮತ್ತು ಅದರ ಹಿಂದಿನ ತಾರ್ಕಿಕ ವಿವರಣೆಯನ್ನು ಗ್ರಹಿಸಲು;
- ಭಾರತದಲ್ಲಿ ವಿಭಾಗೀಯ ಆಡಳಿತದ ಸ್ವರೂಪ ಮತ್ತು ವಿಭಾಗೀಯ ಕಮಿಷನರ್‌ರವರ ಪಾತ್ರವನ್ನು ವಿವರಿಸಲು;

- ಭಾರತದಲ್ಲಿನ ಜಿಲ್ಲಾಡಳಿತದ ವಿಕಾಸವನ್ನು ಗುರುತಿಸಲು;
- ಜಿಲ್ಲಾಡಳಿತದ ಆಂಶಿಕ ಭಾಗಗಳು ಮತ್ತು ಜಿಲ್ಲಾ ಮಟ್ಟದಲ್ಲಿನ ಆಡಳಿತಾತ್ಮಕ ವ್ಯವಸ್ಥೆಯನ್ನು ವಿವರಿಸಲು; ಮತ್ತು
- ಕ್ಷೇತ್ರಾಡಳಿತದಲ್ಲಿನ ಸಮಸ್ಯೆಯ ವಿಭಾಗಗಳನ್ನು ವಿಶ್ಲೇಷಿಸಲು ನೀವು ಶಕ್ತರಾಗತಕ್ಕದ್ದು.

## 16.1 ಪೀಠಿಕೆ

ಕ್ಷೇತ್ರಾಡಳಿತವು ವಿಕೇಂದ್ರೀಕರಿಸಿದ ರಾಜ್ಯದ ಆಡಳಿತವಾಗಿದೆ. ಕ್ಷೇತ್ರಾಡಳಿತದ ಉದ್ದೇಶವು ರಾಜ್ಯದ ನಿಯಂತ್ರಕ ಮತ್ತು ಸೇವಾ ಕಾರ್ಯಗಳನ್ನು ಮೂಲತಃ ಜನರ ಹತ್ತಿರಕ್ಕೆ ತರುವುದೇ ಆಗಿದೆ. ನೀತಿ ನಿರೂಪಣೆ ಮತ್ತು ಅನುಷ್ಠಾನ ಕಾರ್ಯಗಳಲ್ಲಿ ನಾಗರಿಕರ ಹೆಚ್ಚಿನ ಪಾಲ್ಗೊಳ್ಳುವಿಕೆಗೂ ಬೇಡಿಕೆ ಇದೆ. ಈ ಉದ್ದೇಶಕ್ಕಾಗಿ, ಒಂದು ವ್ಯಾಪಕವಾದ ರಾಜನೀತಿಯುತ–ಆಡಳಿತಾತ್ಮಕ (politico-administrative) ವ್ಯವಸ್ಥೆಯನ್ನು (apparatus) ಸ್ಥಾಪಿಸಲಾಗಿದೆ. ದೂರಸ್ಥ (long distance) ಪ್ರದೇಶಗಳು, ಕೆಲಸದ ಪರಿಮಾಣ, ಆಡಳಿತಾತ್ಮಕ ವೆಚ್ಚ ಮತ್ತು ಸಂಪರ್ಕಕ್ಕೆ ವ್ಯಯಿಸುವ ಸಮಯದಿಂದಾಗಿ ರಾಜ್ಯ ಸರಕಾರದ ಅಧಿಕಾರಿಗಳು ತಮ್ಮ ವ್ಯವಹಾರವನ್ನು ಕೇಂದ್ರ ಕಾರ್ಯಾಲಯದಿಂದ ನಿರ್ವಹಿಸಲು ಸಾಧ್ಯವಿಲ್ಲ. ಆದ್ದರಿಂದ ಆಡಳಿತದ ಸಮರ್ಥ ಕಾರ್ಯನಿರ್ವಹಣೆಗಾಗಿ ಕ್ಷೇತ್ರ ಕಛೇರಿಗಳು (field offices) ಅಗತ್ಯವೆನಿಸಿವೆ. ಕಾರ್ಯನೀತಿಗಳು ವಾಸ್ತವತೆಗೆ ಪರಿವರ್ತಿಸಲ್ಪಡುವುದು ಹಾಗೂ ಕಾರ್ಯಕ್ರಮಗಳು ಕಾರ್ಯಗತಗೊಳ್ಳುವುದು ಕ್ಷೇತ್ರ ಮಟ್ಟದಲ್ಲಿ. ಅಭಿವೃದ್ಧಿ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ಭಾರತದಲ್ಲಿ ರಾಜ್ಯ ಮಟ್ಟದ ಇಲಾಖೆಗಳು ಮತ್ತು ಮಂತ್ರಾಲಯಗಳು ಹೆಚ್ಚಿನ ಸಂಖ್ಯೆಯ ಕ್ಷೇತ್ರ ಕಛೇರಿಗಳನ್ನು ಸ್ಥಾಪಿಸಿ, ತಮ್ಮ ಅಧಿಕಾರ ಮತ್ತು ಕಾರ್ಯಗಳನ್ನು ಕ್ಷೇತ್ರಾಧಿಕಾರಿಗಳಿಗೆ ವಹಿಸಿಕೊಡುತ್ತವೆ. ವಿಭಾಗೀಯ ಕಛೇರಿಗಳು, ಅವುಗಳು ಎಲ್ಲೇ ಇದ್ದರೂ, ಜಿಲ್ಲಾ ಕಛೇರಿಗಳು ಮತ್ತು ಸ್ಥಳೀಯ ಸ್ವಾಯತ್ತ ಸರ್ಕಾರಿ ಸಂಸ್ಥೆಗಳು ಸರ್ವೇಸಾಮಾನ್ಯವಾಗಿ ಕ್ಷೇತ್ರಾಡಳಿತದ ಘಟಕಗಳಾಗಿ ಸಂಸ್ಥಾಪಿತಗೊಂಡಿವೆ. ಚಾರಿತ್ರಿಕ ಸಂಪ್ರದಾಯಗಳು, ರಾಜ್ಯನೀತಿಯ ಆಲೋಚನೆಗಳು, ಆಡಳಿತಾತ್ಮಕ ಅನುಕೂಲತೆ, ತಾಂತ್ರಿಕ ಅಗತ್ಯಗಳು, ಅಭಿವೃದ್ಧಿಯ ಅನಿವಾರ್ಯಗಳು ಮತ್ತು ಆಡಳಿತ ಹಾಗೂ ಸಮುದಾಯದ ನಡುವೆ ಹೆಚ್ಚಿನ ಪಾರಸ್ಪರಿಕ ಕ್ರಿಯೆಯ ಅಗತ್ಯದ ಆಧಾರದಲ್ಲಿ ಕ್ಷೇತ್ರಾಡಳಿತ ಕಛೇರಿಗಳು ವ್ಯವಸ್ಥಿತಗೊಂಡಿರುತ್ತವೆ. ಕ್ಷೇತ್ರ ಮಟ್ಟದಲ್ಲಿ ಹೆಚ್ಚಿನ ಸಂಖ್ಯೆಯ ಜನರು ಸರ್ಕಾರದ ಜೊತೆ ನಿಕಟ ಸಂಪರ್ಕದಲ್ಲಿರುತ್ತಾರೆ. ಇದೇ ಸ್ಥಳದಲ್ಲಿ ಸರ್ಕಾರದ ಗುಣಮಟ್ಟ ಮತ್ತು ದಕ್ಷತೆಗಳನ್ನು ಜನರು ನಿರ್ಧರಿಸುತ್ತಾರೆ. ಕ್ಷೇತ್ರಾಡಳಿತವು,

ಸಮುದಾಯ ಜೀವನಕ್ಕೆ ಸಂಬಂಧಿಸಿದ ವಿಶಾಲ ವ್ಯಾಪ್ತಿಯ ಚಟುವಟಿಕೆಗಳನ್ನು ಕೈಗೊಳ್ಳುತ್ತದೆ. ವಿಶೇಷವಾಗಿ, ಸಾರಿಗೆ ಮತ್ತು ಸಂಪರ್ಕ ಕ್ಷೇತ್ರದಲ್ಲಿನ ತಂತ್ರಜ್ಞಾನ ಸಂಬಂಧಿತ ಮುನ್ನಡೆಗಳು ಕ್ಷೇತ್ರಾಡಳಿತದ ವಿಸ್ತರಣೆಯಲ್ಲಿ ಪ್ರಮುಖ ಪಾತ್ರವಹಿಸಿವೆ. ಲೋಕೋಪಯೋಗಿ, ನೀರಾವರಿ, ಆರೋಗ್ಯ, ಶಿಕ್ಷಣ, ಪಂಚಾಯಿತಿ ಮುಂತಾದ ಬಹುತೇಕ ರಾಜ್ಯ ಇಲಾಖೆಗಳು ತಮ್ಮ ಕಛೇರಿಗಳನ್ನು ಜಿಲ್ಲೆ, ಉಪ–ವಿಭಾಗಗಳು ಮತ್ತು ಬ್ಲಾಕ್‌ಗಳಲ್ಲಿ ಹೊಂದಿರುತ್ತವೆ. ಈ ಘಟಕದಲ್ಲಿ; ಪ್ರಾದೇಶಿಕ ಆಡಳಿತ, ವಿಭಾಗೀಯ ಆಡಳಿತ ಮತ್ತು ಜಿಲ್ಲಾಡಳಿತಗಳ ವಿವಿಧ ಅಂಶಗಳನ್ನು ನಾವು ಅಧ್ಯಯನ ಮಾಡಲಿದ್ದೇವೆ. ಇದರ ಜೊತೆಗೆ, ಕ್ಷೇತ್ರಾಡಳಿತದಲ್ಲಿನ ಸಮಸ್ಯಾತ್ಮಕ ಪ್ರದೇಶಗಳನ್ನು ನಾವು ವಿಶ್ಲೇಷಿಸಲಿದ್ದೇವೆ. ಕಲೆಕ್ಟರ್‌ರವರ ಕಛೇರಿ, ಪೊಲೀಸ್ ಆಡಳಿತ, ಮುನ್ಸಿಪಲ್ ಆಡಳಿತ ಮತ್ತು ಪಂಚಾಯತ್ ರಾಜ್‌ಗಳಂತಹ ಕ್ಷೇತ್ರಾಡಳಿತದ ಇತರೆ ಪ್ರಮುಖ ಅಂಶಗಳನ್ನು ಮುಂದಿನ ಘಟಕಗಳಲ್ಲಿ ಚರ್ಚಿಸಲಿದ್ದೇವೆ.

## 16.2 ಪ್ರಾದೇಶಿಕ ಆಡಳಿತ

ನಿರ್ದೇಶನಾಲಯಗಳು ಕಾರ್ಯನೀತಿಯ ಜಾರಿಗೆ ಸಂಬಂಧಪಟ್ಟಿದ್ದು, ಕಾರ್ಯನೀತಿಯ ಕಾರ್ಯಾನ್ವಯದ ಕಾರ್ಯವು ಕ್ಷೇತ್ರದಲ್ಲಿ (ಜಿಲ್ಲೆ, ಬ್ಲಾಕ್ ಮತ್ತು ಗ್ರಾಮದ ಹಂತ) ನಡೆಯುವುದರಿಂದ ಅವುಗಳಿಗೆ ಕ್ಷೇತ್ರ ಕಾರ್ಯಗಳ ಸಮನ್ವಯ ಮತ್ತು ಮೇಲ್ವಿಚಾರಣೆ ಮಾಡಲು ಮಧ್ಯಂತರ ಹಂತದ ಆಡಳಿತದ ಏಜೆನ್ಸಿಗಳನ್ನು (ಕಾರ್ಯಭಾರ) ರೂಪಿಸುವ ಅಗತ್ಯವು (ನಿರ್ದೇಶನಾಲಯಗಳಿಗೆ) ಕಂಡುಬರುತ್ತದೆ. ರಾಜ್ಯದ ಕೇಂದ್ರ ಕಾರ್ಯಾಲಯಗಳು (ನಿರ್ದೇಶನಾಲಯಗಳು) ಮತ್ತು ಜಿಲ್ಲೆಗಳ ನಡುವಿನ ಈ ಮಧ್ಯಂತರ ಹಂತದ ಆಡಳಿತ ವ್ಯವಸ್ಥೆಯನ್ನು 'ಪ್ರಾದೇಶಿಕ ಆಡಳಿತ' ಎಂದು ಕರೆಯಲಾಗುತ್ತದೆ. ಪ್ರತಿಯೊಂದು ವಲಯವು ಹಲವು ಜಿಲ್ಲೆಗಳನ್ನು ಒಳಗೊಂಡಿರುತ್ತದೆ. ಹಾಗಾಗಿ ವಲಯವು ರಾಜ್ಯ ಹಂತಕ್ಕಿಂತಲೂ ಕೆಳಮಟ್ಟದಲ್ಲಿದ್ದು, ಜಿಲ್ಲಾ ಹಂತಕ್ಕಿಂತಲೂ ಮೇಲ್ಮಟ್ಟದಲ್ಲಿರುವ ಒಂದು ನೈಜ ಘಟಕವಾಗಿರುತ್ತದೆ.

### ಮಹತ್ವ

ಪ್ರಾದೇಶಿಕ ಆಡಳಿತವು ಅಧಿಕ ಪ್ರಾತಿನಿಧಿತ್ವ ಮತ್ತು ಕೆಲಸದ ತ್ವರಿತ ನಿರ್ವಹಣೆಗೆ ಅವಕಾಶಮಾಡಿಕೊಡುತ್ತದೆ. ಅದು ಇಲಾಖೆಯ ಮುಖ್ಯಸ್ಥರ ಕಾರ್ಯಭಾರವನ್ನು ಹಗುರಗೊಳಿಸಿ, ರಾಜ್ಯದ ಮೇಲೆ ಪರಿಣಾಮವನ್ನು ಬೀರುವ ಸಾಮಾನ್ಯ ಕಾರ್ಯನೀತಿಗಳತ್ತ ಗಮನವನ್ನು ಕೇಂದ್ರೀಕರಿಸಲು ಅವಕಾಶ ಒದಗಿಸುತ್ತದೆ ಮತ್ತು ನಿರ್ದಿಷ್ಟ ಪ್ರಾದೇಶಿಕ ವಲಯಗಳಿಗೆ ಸಂಬಂಧಿಸಿದ ನಿರ್ದಿಷ್ಟ

ಸಮಸ್ಯೆಗಳ ಸವಿವರ ಪರಿಶೀಲನೆಯನ್ನು ಸಾಧ್ಯಗೊಳಿಸುತ್ತದೆ. ಜಿಲ್ಲಾ ಹಂತದಲ್ಲಿ ಕಾರ್ಯಗತಗೊಳಿಸಲಾಗುತ್ತಿರುವ ಕಾರ್ಯಕ್ರಮಗಳ ಸುಸಂಘಟನೆ ಮತ್ತು ಮೇಲ್ವಿಚಾರಣೆಗೂ ಅದು ಅನುವುಮಾಡಿಕೊಡುತ್ತದೆ.

ಜಿಲ್ಲಾಡಳಿತ ಕುರಿತಾದ ಎಆರ್‌ಸಿ ಅಧ್ಯಯನ ತಂಡದ ವರದಿಯು (1967) ರಾಜ್ಯವೊಂದಕ್ಕೆ ಪ್ರಾದೇಶಿಕ ಆಡಳಿತ ವ್ಯವಸ್ಥೆಯ ಮಹತ್ವವನ್ನು ವಿವರಿಸಿದೆ. "ಭಾರತದಲ್ಲಿ ಹೆಚ್ಚಿನ ರಾಜ್ಯಗಳು ವಿಸ್ತೀರ್ಣ ಮತ್ತು ಜನಸಂಖ್ಯೆಯನ್ನು ಆಧರಿಸಿ ಹೋಲಿಕೆ ಮಾಡಿದಾಗ ದೊಡ್ಡದಾಗಿವೆ. ಆರು ದೊಡ್ಡ ರಾಜ್ಯಗಳ ಒಟ್ಟಾರೆ ವಿಸ್ತೀರ್ಣವು ದೇಶದ ವಿಸ್ತೀರ್ಣದ ಸುಮಾರು ಶೇ. 61ರಷ್ಟಿದೆ. ಅಂತಹ ವಿಶಾಲ ರಾಜ್ಯಗಳಲ್ಲಿ ಪ್ರತಿಯೊಂದು ವಲಯದ ಸಾಮಾಜೋ–ಆರ್ಥಿಕ ಮತ್ತು ಭೌಗೋಳಿಕ ವರ್ಚಸ್ಸುಗಳಲ್ಲಿ ವ್ಯಾಪಕ ಭಿನ್ನತೆಗಳು ಕಂಡುಬರುತ್ತವೆ. ಇದು ಆಡಳಿತ ವ್ಯವಸ್ಥೆಯಲ್ಲಿ ಪ್ರಾದೇಶಿಕ ಹಂತದ ಅಗತ್ಯವನ್ನು ಒತ್ತಿ ಹೇಳುತ್ತದೆ. ಒಂದೆಡೆ, ಕಾರ್ಯನೀತಿಯ ಸಂವಿನ್ಯಾಸ ಮತ್ತು ಸಮನ್ವಯವನ್ನು ಜಿಲ್ಲೆ ಮತ್ತು ರಾಜ್ಯ ಸರ್ಕಾರದ ಮಧ್ಯಂತರ ಹಂತದಲ್ಲಿ ಉತ್ತಮವಾಗಿ ಸಾಧಿಸಬಹುದಾಗಿದ್ದು; ಇನ್ನೊಂದೆಡೆ, ಕಾರ್ಯನೀತಿ ಜಾರಿಗೊಳಿಸಲ್ಪಡುವ ಸ್ಥಳದಿಂದ ತುಲನಾತ್ಮಕವಾಗಿ ದೂರದಲ್ಲಿರುವ ರಾಜ್ಯ ಸರ್ಕಾರವು ಸ್ಥಳೀಯ ಸಮಸ್ಯೆಗಳನ್ನು ಸರಿಯಾದ ದೃಷ್ಟಿಕೋನದಿಂದ ತೂಗಿ ನೋಡಲು ಸಾಧ್ಯವಾಗುವುದಿಲ್ಲ. ಇಂತಹ ಸನ್ನಿವೇಶಗಳಲ್ಲಿ, ಹಿರಿಯ ಮತ್ತು ಅನುಭವಿ ಆಡಳಿತಗಾರರ ಸೇವೆಯು ರಾಜ್ಯದ ಕೇಂದ್ರ ಕಾರ್ಯಾಲಯದಲ್ಲಿನ ನೀತಿ ನಿರೂಪಣಾ ಹಂತ ಮತ್ತು ಜಿಲ್ಲೆಯಲ್ಲಿನ ಕಾರ್ಯಾನ್ವಯಗೊಳಿಸುವ ಹಂತದ ನಡುವಿನ ಮಧ್ಯಂತರ ಹಂತದಲ್ಲಿ ಅಗತ್ಯವಾಗಿದೆ".

**ಅರ್ಥ ಮತ್ತು ವಿನ್ಯಾಸಗಳು**

'ಪ್ರಾದೇಶಿಕ ಆಡಳಿತ' ಎಂಬ ಪದಗುಚ್ಛವು ರಾಜ್ಯಕ್ಕಿಂತಲೂ ಕೆಳ ಹಂತದಲ್ಲಿ ಆದರೆ ಜಿಲ್ಲೆಗಿಂತಲೂ ಮೇಲ್ಮಟ್ಟದಲ್ಲಿ ಕಾರ್ಯನಿರ್ವಹಿಸುವ ವ್ಯವಸ್ಥೆಗಳ ಜಾಲಕ್ಕೆ ಸಂಬಂಧಿಸಿದೆ. ರಾಜ್ಯವೊಂದರ ಹೆಚ್ಚಿನ ಇಲಾಖೆಗಳು ಈ ರೀತಿಯ ಮಧ್ಯಂತರ ಭೌಗೋಳಿಕ ಪ್ರದೇಶಗಳಲ್ಲಿ ಪ್ರಾದೇಶಿಕ ಕೇಂದ್ರ ಕಾರ್ಯಾಲಯಗಳನ್ನು ನಿರ್ವಹಿಸುತ್ತವೆ. ಈ ಭೂಭಾಗಗಳು ಸರ್ವಸಮಾನ (common) ಹೆಸರನ್ನು ಹೊಂದಿರುವುದಿಲ್ಲ ಮತ್ತು ರಾಜ್ಯ ಮಟ್ಟದ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಭೌಗೋಳಿಕವಾಗಿ ಸಮವ್ಯಾಪಕವಾಗಿರುವುದಿಲ್ಲ (coterminous). ವಿವಿಧ ಉದ್ದೇಶಗಳಿಗಾಗಿ (ಆದಾಯ ಸಂಗ್ರಹಣೆ, ಕಾನೂನು ಮತ್ತು ಸುವ್ಯವಸ್ಥೆಯ ಪಾಲನೆ, ಅರಣ್ಯ ನಿರ್ವಹಣೆ ಇತ್ಯಾದಿ) ಅವುಗಳು ಅನೇಕ ಬಾರಿ

ಪರಸ್ಪರ ವೈರುಧ್ಯವನ್ನು ಹೊಂದಿರುತ್ತವೆ. ಪ್ರತಿಯೊಂದು ಇಲಾಖೆಯು ತನ್ನ ವಿಶಿಷ್ಟ ಅಗತ್ಯಕ್ಕೆ ಸರಿಹೊಂದುವಂತೆ ರಾಜ್ಯದ ಉಪ–ರಾಜ್ಯವನ್ನು ರಚಿಸುತ್ತದೆ.

ಆದಾಯ ಮತ್ತು ಸಾರ್ವತ್ರಿಕ ಆಡಳಿತದ ಉದ್ದೇಶಗಳಿಗಾಗಿ ಹೆಚ್ಚಿನ ರಾಜ್ಯಗಳನ್ನು "ವಿಭಾಗಗಳೆಂದು" ಕರೆಯಲ್ಪಡುವ ನೈಜ ಘಟಕಗಳಾಗಿ ವಿಭಜಿಸಲಾಗಿದೆ. ತಮ್ಮ ಅಧೀನಕ್ಕೆ ಒಳಪಡುವ ಜಿಲ್ಲಾ ಕಲೆಕ್ಟರ್‌ಗಳ ಕಾರ್ಯದ ಸಮನ್ವಯ ಮತ್ತು ಮೇಲ್ವಿಚಾರಣೆ ನಡೆಸುವ ವಿಭಾಗೀಯ ಕಮಿಷನರ್ ಪ್ರತಿಯೊಂದು ವಿಭಾಗದ ಮುಖ್ಯಸ್ಥರಾಗಿರುತ್ತಾರೆ. ಅದೇ ರೀತಿ, ರಾಜ್ಯದ ಕೇಂದ್ರ ಕಾರ್ಯಾಲಯದಲ್ಲಿರುವ ಪೊಲೀಸ್ ಇಲಾಖೆಯು ಮಧ್ಯಂತರ ಹಂತದಲ್ಲಿ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್‌ರವರನ್ನು ಹೊಂದಿದೆ. ಪೊಲೀಸ್ ಇಲಾಖೆಗೆ ಸಂಬಂಧಿಸಿದಂತೆ ಈ ರೀತಿಯ ಪ್ರಾದೇಶಿಕ ವಿಭಾಗಗಳನ್ನು 'ರೇಂಜ್‌ಗಳೆಂದು' ಕರೆಯುತ್ತಾರೆ. ಈ ರೇಂಜ್ ಭೂಭಾಗವು ಕಮಿಷನರ್‌ರವರ ವಿಭಾಗದೊಡನೆ ಸಮವ್ಯಾಪಕವಾಗಿರುತ್ತದೆ. ಎಲ್ಲಿ ಇಲಾಖೆಯ ಕಾರ್ಯಭಾರವು ಇದನ್ನು ಅಪೇಕ್ಷಿಸುವುದಿಲ್ಲವೋ ಆ ಮಧ್ಯಂತರ ಭೂಭಾಗ ಘಟಕವು ಕಮಿಷನರ್‌ರವರ ವಿಭಾಗದೊಡನೆ ಸಮವ್ಯಾಪಕವಾಗಿಲ್ಲದಿರಬಹುದು. ಹೀಗೆ, ರೇಂಜ್‌ವೊಂದರ ಭೌಗೋಳಿಕ ಕ್ಷೇತ್ರವನ್ನು ನಿರ್ಧರಿಸುವಾಗ ಅರಣ್ಯ ಇಲಾಖೆಯು ರಾಜ್ಯವನ್ನು 'ರೇಂಜ್‌ಗಳೆಂದು' ಕರೆಯಲ್ಪಡುವ ಮಧ್ಯಂತರ ಭೌಗೋಳಿಕ ಪ್ರದೇಶಗಳಾಗಿ ವಿಭಜಿಸುತ್ತದೆ. ಇನ್ನೊಂದು ಉದಾಹರಣೆ ತೆಗೆದುಕೊಳ್ಳುವುದಾದರೆ, ರಾಜ್ಯ ಮಟ್ಟದ ನೀರಾವರಿ ಇಲಾಖೆಯು ತಮ್ಮ ವಲಯದ ಕಾರ್ಯನಿರ್ವಾಹಕ ಎಂಜಿನಿಯರ್‌ಗಳ ಉಸ್ತುವಾರಿ ಹೊಂದಿರುವ ಸೂಪರಿಂಟೆಂಡಿಂಗ್ ಎಂಜಿನಿಯರ್ ಅವರನ್ನು ಪ್ರಾದೇಶಿಕ ಮಟ್ಟದಲ್ಲಿ ಹೊಂದಿದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ ನಿರ್ದಿಷ್ಟ ಇಲಾಖೆಯೊಂದು ಪ್ರಾದೇಶಿಕ ಆಡಳಿತ ವ್ಯವಸ್ಥೆಯನ್ನು ಹೊಂದಿರಬೇಕೇ ಇಲ್ಲವೇ ಎಂಬುದು (1) ರಾಜ್ಯದ ಪ್ರಮಾಣ ಮತ್ತು (2) ಅದು ನಿರ್ವಹಿಸುವ ಕಾರ್ಯದ ಪ್ರಮಾಣ ಮತ್ತು ಸ್ವರೂಪಗಳನ್ನು ಆಧರಿಸಿದೆ. ಇಲಾಖೆಯೊಂದು ಸ್ಥಾಪಿಸಲ್ಪಟ್ಟ ಮತ್ತು ಸಂವೃದ್ಧಗೊಂಡ ನಿರ್ದಿಷ್ಟ ಚಾರಿತ್ರಿಕ ಸಂದರ್ಭಗಳು ಹಾಗೂ ಅದರ ವಿಕಾಸದಲ್ಲಿ ಭಾಗಿಗಳಾಗಿದ್ದ ವ್ಯಕ್ತಿಗಳೂ ಸಹ ನಿಸ್ಸಂಶಯವಾಗಿ ಅಂತಹ ನಿರ್ಧಾರದ ಮೇಲೆ ಪರಿಣಾಮ ಬೀರುತ್ತಾರೆ.

**ಪಾತ್ರ**

ಪ್ರಾದೇಶಿಕ ಮಟ್ಟದ ಅಧಿಕಾರಿಯ ಪ್ರಧಾನ ಕಾರ್ಯವೆಂದರೆ, ತನ್ನ ಇಲಾಖೆಯ ಜಿಲ್ಲಾ ಹಂತದ ಕಾರ್ಯನಿರ್ವಾಹಕರ ಕೆಲಸದ ಮೇಲ್ವಿಚಾರಣೆ ಮತ್ತು ಸಮನ್ವಯ. ಪ್ರಾದೇಶಿಕ ಅಧಿಕಾರಿಯ ಪ್ರಮುಖ ಕಾರ್ಯಗಳನ್ನು ಕೆಳಗೆ ನಮೂದಿಸಲಾಗಿದೆ:

- ಜಿಲ್ಲಾ ಹಂತದ ಕಿರಿಯ ಅಧಿಕಾರಿಗಳ ನಡಾವಳಿ ಮತ್ತು ಮಾನದಂಡಗಳನ್ನು ಅಳವಡಿಸುವ ಪ್ರಮುಖ ಕಾರ್ಯವನ್ನು ಪ್ರಾದೇಶಿಕ ಅಧಿಕಾರಿಯು ನೆರವೇರಿಸುತ್ತಾನೆ ಮತ್ತು ಈ ನಡಾವಳಿಗಳು ಹಾಗೂ ಮಾನದಂಡಗಳ ಪಾಲನೆಯನ್ನು; ವಿಸ್ತಾರವಾದ ತನಿಖಾ ವ್ಯವಸ್ಥೆಗಳು, ವರದಿಗಳು, ಸಲ್ಲಿಕೆಗಳು (returns), ನಿರ್ದೇಶನಗಳು ಮತ್ತು ಜಿಲ್ಲಾ ಮಟ್ಟದ ಕಾರ್ಯನಿರ್ವಾಹಕರ ಜೊತೆ ಆಗಿಂದಾಗ್ಗೆ ಸಭೆ ನಡೆಸುವುದರ ಮೂಲಕ ಅವನು ಖಚಿತಪಡಿಸಿಕೊಳ್ಳುತ್ತಾನೆ.
- ಸ್ಥಳ ಪರಿಶೀಲನೆ ನಡೆಸುವಾಗ, ಕೆಳಮಟ್ಟದ ಭೌಗೋಳಿಕ ಸಂರಚನೆಯ ಕಾರ್ಯನಿರ್ವಾಹಕರು ಎದುರಿಸುವ ತೊಂದರೆ ಅಥವಾ ಸಮಸ್ಯೆಗಳ ಬಗ್ಗೆ ಪ್ರಾದೇಶಿಕ ಅಧಿಕಾರಿಯು ಸ್ವತಃ ಮನವರಿಕೆ ಮಾಡಿಕೊಂಡು ರಾಜ್ಯದ ಪ್ರಧಾನ ಕಾರ್ಯಾಲಯಕ್ಕೆ ಮಾಹಿತಿ ಒದಗಿಸುತ್ತಾನೆ. ಅವುಗಳನ್ನು ಸರಿಪಡಿಸುವ ಕ್ರಮಗಳನ್ನು ಸಹ ಆರಂಭಿಸುತ್ತಾನಲ್ಲದೆ, ಗುರಿಗಳ ಸಾಧನೆಯನ್ನು ಖಚಿತಪಡಿಸಿಕೊಳ್ಳುವ ಜವಾಬ್ದಾರಿಯನ್ನು ಈತನು ಹೊಂದಿರುತ್ತಾನೆ.
- ಅವನು ತನ್ನ ಅಧೀನಕ್ಕೆ ಒಳಪಡುವ ಪಂಚಾಯಿತಿ ರಾಜ್ ಸಂಸ್ಥೆಗಳ ಜೊತೆಯಲ್ಲಿ ಸಕ್ರಿಯ ಸಂಪರ್ಕ ಹೊಂದಿರುತ್ತಾನೆ.

**ಮೌಲ್ಯ ನಿರ್ಧಾರ**

ರಾಜ್ಯ ಪ್ರಧಾನ ಕಾರ್ಯಾಲಯ (ಕಾರ್ಯನೀತಿ ನಿರೂಪಣಾ ಹಂತ) ಮತ್ತು ಜಿಲ್ಲೆಗಳ (ಕಾರ್ಯನೀತಿ ಜಾರಿಗೊಳಿಸುವ ಹಂತ) ನಡುವಿನ ಮಧ್ಯಂತರ ಆಡಳಿತ ವ್ಯವಸ್ಥೆಗೆ ತಾನು ನಿರ್ವಹಿಸಬಹುದಾದ ಯಾವುದೇ ಮೌಲಿಕ ಪಾತ್ರವಿಲ್ಲ ಎಂಬುದನ್ನು ಆಧರಿಸಿದ ಟೀಕೆಯಿದೆ. ವಾಸ್ತವವಾಗಿ, ಇದು ಆಡಳಿತಾತ್ಮಕ ಪ್ರಕ್ರಿಯೆಯನ್ನು ವಿಳಂಬಿಸುವ ಕಾರಣದಿಂದ, ಆಡಳಿತದ ಅನಗತ್ಯ ಹಂತವಾಗಿದೆ.

## 16.3 ವಿಭಾಗೀಯ ಆಡಳಿತ

ದೇಶದಲ್ಲಿ, ಉಪ–ರಾಜ್ಯ ಮಟ್ಟದ ಆಡಳಿತ ವ್ಯವಸ್ಥೆಯು ಏಕರೂಪತೆ ಹೊಂದಿಲ್ಲ. ಪ್ರಧಾನವಾಗಿ, ಎರಡು ವಿಭಿನ್ನ ವ್ಯವಸ್ಥೆಗಳಿವೆ. ಮೊದಲನೆಯದಾಗಿ, ರಾಜ್ಯವನ್ನು ಕೆಲವು ವಿಭಾಗಗಳನ್ನಾಗಿ ವಿಂಗಡಿಸಲಾಗಿದ್ದು, ಪ್ರತಿಯೊಂದು ವಿಭಾಗವೂ ಕೆಲವು ಜಿಲ್ಲೆಗಳನ್ನು ಒಳಗೊಂಡಿದೆ. ಈ ವ್ಯವಸ್ಥೆಯಲ್ಲಿ ವಿಭಾಗೀಯ ಕಮಿಷನರ್; ವಿಭಾಗದ ಮುಖ್ಯಸ್ಥನಾಗಿದ್ದು, ಜಿಲ್ಲಾಡಳಿತ ಹಾಗೂ ರಾಜ್ಯ ಸರ್ಕಾರಗಳ ನಡುವೆ ಸಂಪರ್ಕಕೊಂಡಿಯಾಗಿ ಕಾರ್ಯನಿರ್ವಹಿಸುತ್ತಾನೆ. ವಿಭಾಗಗಳಿಲ್ಲದಿರುವ ಎರಡನೇ ವ್ಯವಸ್ಥೆಯಲ್ಲಿ, ಯಾವುದೇ ಮಧ್ಯವರ್ತಿಯಿಲ್ಲದೆ ಜಿಲ್ಲಾಡಳಿತವು ರಾಜ್ಯ ಸರ್ಕಾರದ ಜೊತೆ ನೇರವಾಗಿ ವ್ಯವಹರಿಸುತ್ತದೆ. ದೇಶದಲ್ಲಿನ ಕ್ಷೇತ್ರಾಡಳಿತವು ಈ ಎರಡೂ ವ್ಯವಸ್ಥೆಗಳ ನಡುವೆ ಕಂಡುಬರುತ್ತದೆ.

ರಾಜ್ಯ ಆಡಳಿತದ ಪ್ರಮುಖ ಲಕ್ಷಣವೆಂದರೆ, ಅನೇಕ ಕಾರ್ಯನಿರ್ವಾಹಕ ಇಲಾಖೆಗಳು ಪ್ರಾದೇಶಿಕ ಕಛೇರಿಗಳನ್ನು ರಾಜ್ಯದಲ್ಲಿ ಹೊಂದಿವೆ. ಪೊಲೀಸ್ ಇಲಾಖೆಯಲ್ಲಿ ಎರಡು ಅಥವಾ ಹೆಚ್ಚಿನ ಜಿಲ್ಲೆಗಳನ್ನು ಒಳಗೊಂಡಂತೆ 'ರೇಂಜ್' ಕಛೇರಿಗಳನ್ನು ಸ್ಥಾಪಿಸಲಾಗಿದೆ. ರೇಂಜ್‌ನ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್‌ರವರು ರಾಜ್ಯ ಮಟ್ಟದ ಪೊಲೀಸ್ ಮಹಾನಿರ್ದೇಶಕ ಮತ್ತು ಜಿಲ್ಲಾ ಮಟ್ಟದ ಪೊಲೀಸ್ ಸೂಪರಿಂಟೆಂಡೆಂಟ್ ಇವರುಗಳ ನಡುವೆ ಸಂಪರ್ಕಕೊಂಡಿಯಾಗಿ ಕಾರ್ಯನಿರ್ವಹಿಸುತ್ತಾರೆ. ಗಮನಿಸಬೇಕಾದ ಒಂದು ಪ್ರಮುಖ ಲಕ್ಷಣವೆಂದರೆ, ಈ ಪ್ರಾದೇಶಿಕ ಹಂತದ ಕಛೇರಿಗಳ ಅಧಿಕಾರ ವ್ಯಾಪ್ತಿಯು ಏಕರೂಪತೆ ಹೊಂದಿರುವುದಿಲ್ಲ. ಪೊಲೀಸ್ ಅಥವಾ ಶಿಕ್ಷಣ ಇಲಾಖೆಯಲ್ಲಿನ 'ರೇಂಜ್' ಅಥವಾ 'ವಲಯದ' ಜಿಲ್ಲೆಗಳ ಸಂಖ್ಯೆಯು ಒಂದೇ ರೀತಿ ಇರುವುದಿಲ್ಲ. ವಿಭಾಗೀಯ ವ್ಯವಸ್ಥೆಯನ್ನು ಪರಿಗಣಿಸದೆ ಪ್ರಾದೇಶಿಕ ಕಛೇರಿಗಳನ್ನು ಸ್ಥಾಪಿಸಲಾಗುವುದು. ಸಾರ್ವಜನಿಕ ಆಡಳಿತ ಸಂರಚನೆಯಲ್ಲಿ ವಿಭಾಗಗಳ ವಿಕಾಸವು ಇತಿಹಾಸ, ಸಂಪ್ರದಾಯ ಮತ್ತು ಉಪಯುಕ್ತತೆಗಳಿಂದ ಪ್ರಭಾವಿತವಾಗಿರುತ್ತದೆ. ಜಿಲ್ಲೆಗಳ ಪ್ರಮಾಣಕ್ಕನುಗುಣವಾಗಿ ವಿಭಾಗವೊಂದು ಮೂರು ಅಥವಾ ನಾಲ್ಕು ಅಥವಾ ಅದಕ್ಕಿಂತಲೂ ಹೆಚ್ಚಿನ ಜಿಲ್ಲೆಗಳನ್ನು ಒಳಗೊಂಡಿರಬಹುದಾಗಿದೆ. ವಿಭಾಗಗಳ ಪ್ರಮಾಣವು, ವಿಸ್ತೀರ್ಣ ಮತ್ತು ಜನಸಂಖ್ಯೆಯ ನಿಟ್ಟಿನಲ್ಲಿ ರಾಜ್ಯದಲ್ಲಿ ಆಂತರಿಕವಾಗಿ ವಿಭಾಗದಿಂದ ವಿಭಾಗಕ್ಕೆ ಬದಲಾಗುತ್ತದೆ.

ವಿಭಾಗೀಯ ಕಮಿಷನರ್‌ರವರು ವಿಭಾಗದ ಅತ್ಯುನ್ನತ ಕಾರ್ಯನಿರ್ವಾಹಕ ಅಧಿಕಾರಿಯಾಗಿರುತ್ತಾರೆ. ಅವರು ಆಡಳಿತದ ಮೇಲ್ವಿಚಾರಣೆ ನಡೆಸುತ್ತಾರೆ ಮತ್ತು ರಾಜ್ಯದ ಕಾರ್ಯ ನೀತಿಗಳನ್ನು ಜಾರಿಗೊಳಿಸುತ್ತಾರೆ. ಬಹುಮಟ್ಟಿಗೆ, ಕಂದಾಯ ಮತ್ತು ಅಭಿವೃದ್ಧಿ ಇಲಾಖೆಗಳು, ಸಾರ್ವಜನಿಕ ವಿತರಣಾ ವ್ಯವಸ್ಥೆ ಮತ್ತು ಕ್ಷೇಮಾಭ್ಯುದಯ ಇಲಾಖೆಗಳು ವಿಭಾಗೀಯ ಕಮಿಷನರ್‌ರವರ ನಿಯಂತ್ರಣಕ್ಕೆ ಒಳಪಟ್ಟಿರುತ್ತವೆ. ಸಂಬಂಧಪಟ್ಟ ಕಾಯಿದೆಗಳ ಪ್ರದತ್ತ ಅಧಿಕಾರವನ್ನು ಚಲಾಯಿಸುವುದರ ಮೂಲಕ ವಿಭಾಗದ ಕಂದಾಯ ಕಮಿಷನರ್ ಸ್ಥಾನದಲ್ಲಿ ಅವರು ಕಾರ್ಯನಿರ್ವಹಿಸುತ್ತಾರೆ. ಕಂದಾಯ ಮತ್ತು ತಕಾವಿ ಸಾಲಗಳ ಸಂಗ್ರಹಣೆ ಮತ್ತು ಕಂದಾಯ ಕಛೇರಿಗಳನ್ನು ಆಗಿಂದಾಗ್ಗೆ ತನಿಖೆ ಮಾಡುವುದರ ಮೂಲಕ ಕಂದಾಯ ಆಡಳಿತದ ಕಾರ್ಯವನ್ನು ಅವರು ಪರಿಶೀಲಿಸುತ್ತಾರೆ. ಗ್ರಾಮೀಣಾಭಿವೃದ್ಧಿ ಆಡಳಿತದ ಮುಖ್ಯಸ್ಥರಾಗಿರುವುದರಿಂದ ಅವರನ್ನು ವಿಭಾಗೀಯ ಅಭಿವೃದ್ಧಿ ಕಮಿಷನರ್ ಎಂದು ಪರಿಗಣಿಸಲಾಗುತ್ತದೆ. ಪಂಚಾಯಿತಿ ರಾಜ್ ಸಂಸ್ಥೆಗಳನ್ನು ಒಳಗೊಂಡಂತೆ ಎಲ್ಲಾ ಗ್ರಾಮೀಣಾಭಿವೃದ್ಧಿ ಇಲಾಖೆಗಳು ಇವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತವೆ. ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ ಕೃಷಿ ಸಂಬಂಧಿತ ಅಭಿವೃದ್ಧಿ, ಸಹಕಾರ ಮುಂತಾದ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳನ್ನು ಅವರು ಪರಿಶೀಲಿಸುತ್ತಾರೆ. ಎಲ್ಲಾ ಮುನ್ಸಿಪಲ್ ಸಂಸ್ಥೆಗಳನ್ನೂ ಅವರು ಮೇಲ್ವಿಚಾರಣೆ ಮಾಡುತ್ತಾರೆ ಮತ್ತು ನಿಯಂತ್ರಿಸುತ್ತಾರೆ. ವಿಭಾಗದಲ್ಲಿನ ಅಭಿವೃದ್ಧಿ ಚಟುವಟಿಕೆಗಳ ಆಮೂಲಾಗ್ರ ಪರಿಶೀಲನೆಯನ್ನು ಅವರಿಂದ ನಿರೀಕ್ಷಿಸಲಾಗಿದೆ. ಅವರು ವಿಭಾಗೀಯ ಸಮನ್ವಯ ಸಮಿತಿಯ ಸಭೆಗಳ ಅಧ್ಯಕ್ಷತೆ ವಹಿಸುತ್ತಾರೆ ಮತ್ತು ವಿವಿಧ ಇಲಾಖೆಗಳ ಪ್ರಗತಿಯನ್ನು ಪರಿಶೀಲಿಸುತ್ತಾರೆ. ಡೆಪ್ಯುಟಿ ಕಮಿಷನರ್‌ರವರಂತೆ ಅವರೂ ಜನತೆಯೊಂದಿಗೆ ನಿರಂತರ ಸಂಪರ್ಕವನ್ನು ಹೊಂದಿದ್ದು, ಅವರ ಕುಂದುಕೊರತೆಗಳನ್ನು ನೀಗಿಸಲು ಪ್ರಯತ್ನಿಸುತ್ತಾರೆ. ವಿಭಾಗೀಯ ಕಮಿಷನರ್‌ರವರು ಒಬ್ಬ ಪ್ರಮುಖ ಕಾರ್ಯನಿರ್ವಾಹಕರಾಗಿದ್ದು, ಅವರಿಗೆ ವಿಭಾಗೀಯ ಹಂತದ ಪ್ರಮುಖ ಕಾರ್ಯಗಳನ್ನು ವಹಿಸಲಾಗಿದೆ ಎಂಬುದನ್ನು ಇದು ಸ್ಪಷ್ಟವಾಗಿ ಸೂಚಿಸುತ್ತದೆ.

ವಿಭಾಗಗಳು ಮತ್ತು ವಿಭಾಗೀಯ ಕಮಿಷನರ್‌ಗಳ ಉಪಯುಕ್ತತೆ ಅಥವಾ ಅನುಪಯುಕ್ತತೆಯನ್ನು ಕುರಿತ ಅನುಭವದ ಆಧಾರದ ಮೇಲೆ ಎರಡು ವಿಭಿನ್ನ ಅಭಿಪ್ರಾಯಗಳು ಕಂಡುಬರುತ್ತವೆ. ಮೊದಲನೇ ಅಭಿಪ್ರಾಯದಂತೆ ವಿಭಾಗವು ಆಡಳಿತದ ಉಪಯುಕ್ತ ಸ್ತರವೆಂದು ಸಾಬೀತುಗೊಂಡಿದ್ದು, ಅದನ್ನು ಸದೃಢಗೊಳಿಸಬೇಕಿದೆ. ಈ ಅಭಿಪ್ರಾಯವನ್ನು ಸಮರ್ಥಿಸುವವರು ಜಿಲ್ಲಾಡಳಿತಕ್ಕೆ ಪರಿಣಾಮಕಾರಿ ನಾಯಕತ್ವ ಒದಗಿಸಲು ಸಾಧ್ಯವಾಗುವಂತೆ ವಿಭಾಗೀಯ ಕಮಿಷನರ್‌ರವರಿಗೆ ಹೆಚ್ಚಿನ ಅಧಿಕಾರವನ್ನು

ವಿಕೇಂದ್ರೀಕರಿಸಬೇಕೆಂದು ವಾದಿಸುತ್ತಾರೆ. ರಾಜ್ಯ ಸರ್ಕಾರವು ಪರಿಣಾಮಕಾರಿಯಾಗಿ ನಿಯಂತ್ರಣವನ್ನು ಸಾಧಿಸುವ ನಿಟ್ಟಿನಲ್ಲಿ, ಜಿಲ್ಲೆಯು ಅತ್ಯಂತ ದೊಡ್ಡದೆನಿಸುತ್ತದೆ. ಸಾಮಾನ್ಯವಾಗಿ, ಜಿಲ್ಲಾ ಕಲೆಕ್ಟರ್ ಅಥವಾ ಡೆಪ್ಯುಟಿ ಕಮಿಷನರ್‌ರವರು ಕಿರಿಯರಾಗಿರುವುದರಿಂದ ಮಾರ್ಗದರ್ಶನ ಹಾಗೂ ಸಲಹೆಗಳಿಗಾಗಿ ಅವರು ನಿಯಮಿತವಾಗಿ ಸಂವಹಿಸಬಹುದಾದ ವಿಭಾಗೀಯ ಕಮೀಷನ್‌ರವರ ಉಪಸ್ಥಿತಿಯು ಅಗತ್ಯವೆನಿಸುತ್ತದೆ ಎಂದೂ ವಾದಿಸಲಾಗುತ್ತದೆ. ಈ ಕಾರಣಗಳಿಂದಾಗಿ ವಿಭಾಗೀಯ ಆಡಳಿತವನ್ನು ಮುಂದುವರೆಸುವ ಹಾಗೂ ಸದೃಢಗೊಳಿಸುವ ಅಗತ್ಯಕ್ಕೆ ಅವರು ಒತ್ತುನೀಡುತ್ತಾರೆ..

ವಿಭಾಗೀಯ ಆಡಳಿತವನ್ನು ಅತ್ಯಂತ ಉಪಯುಕ್ತವಾದ ಪ್ರಾದೇಶಿಕ ಆಡಳಿತವೆಂದು ಪರಿಗಣಿಸಲಾಗಿದೆ. ಇದನ್ನು ಮೂರು ರೀತಿಯಲ್ಲಿ ನಿರ್ವಹಿಸಬಹುದಾಗಿದ್ದು, ಅವು ಹೀಗಿವೆ: (1) ಹೆಚ್ಚಿನ ನಿಯೋಜನೆ ಮತ್ತು ವಿಕೇಂದ್ರಿಕರಣದ ಮೂಲಕ, (2) ವಿಭಾಗೀಯ ಕಮಿಷನರ್‌ರವರಿಗೆ ಸಮನ್ವಯದ ಕಾರ್ಯಗಳನ್ನು ವಹಿಸುವುದರ ಮೂಲಕ ಮತ್ತು (3) ನೀತಿ ನಿರೂಪಣೆಯಲ್ಲಿ ವಿಭಾಗೀಯ ಕಮಿಷನರ್‌ರವರನ್ನು ಸಲಹೆಗಾರರಾಗಿ ಬಳಸಿಕೊಳ್ಳುವುದರ ಮೂಲಕ. ಜಿಲ್ಲಾಡಳಿತ ಕುರಿತಂತೆ ಆಡಳಿತಾತ್ಮಕ ಸುಧಾರಣಾ ಸಮಿತಿಯ ಅಧ್ಯಯನ ತಂಡವು ಸಣ್ಣ ರಾಜ್ಯಗಳಾದ ಕೇರಳ, ಪಂಜಾಬ್ ಮತ್ತು ಹರಿಯಾಣವನ್ನು ಹೊರತುಪಡಿಸಿ ಉಳಿದೆಲ್ಲಾ ರಾಜ್ಯಗಳಲ್ಲಿ ವಿಭಾಗೀಯ ಕಮಿಷನರ್‌ರವರ ವ್ಯವಸ್ಥೆಯನ್ನು ಪ್ರಾರಂಭಿಸಬೇಕೆಂದು ಶಿಫಾರಸ್ಸು ಮಾಡಿದೆ.

ಇನ್ನೊಂದು ಅಭಿಪ್ರಾಯವೆಂದರೆ, ವಿಭಾಗೀಯ ಕಮಿಷನ್‌ರವರ ಕಛೇರಿಯನ್ನು ರದ್ದುಪಡಿಸಬೇಕೆಂಬುದು. ಇದಕ್ಕೆ ಅನೇಕ ಕಾರಣಗಳನ್ನು ನೀಡಲಾಗಿದೆ. ಅಧಿಕಾರಿಯು ಒಬ್ಬನೇ ಆಗಿರುವುದರಿಂದ, ಎಲ್ಲಾ ಇಲಾಖೆಗಳು ಮತ್ತು ಸ್ಥಳೀಯ ಸಂಸ್ಥೆಗಳ ಮೇಲ್ವಿಚಾರಣೆಗೆ ಸಮಯವನ್ನು ನೀಡಲು ಮತ್ತು ಅದರತ್ತ ಗಮನಹರಿಸಲು ಸಾಧ್ಯವಾಗುವುದಿಲ್ಲ. ಎರಡನೆಯದಾಗಿ, ಕಮಿಷನರ್‌ರವರು ಕಲೆಕ್ಟರ್‌ರವರ ಸಮೀಪದಲ್ಲಿರುವುದರಿಂದ ಕಲೆಕ್ಟರ್‌ರವರ ಮುಂತೊಡಗುಗಳಿಗೆ (initiative) ನಿರುತ್ಸಾಹ ಉಂಟಾಗಬಹುದು. ಕಮಿಷನರ್‌ರವರು, ಕಲೆಕ್ಟರ್‌ರವರ ಶಾಸನಬದ್ಧ ಕಾರ್ಯಗಳಿಗೆ ಅಡ್ಡಿಪಡಿಸಬಹುದೆಂಬುದರ ಬಗ್ಗೆಯೂ ಅನುಮಾನಗಳಿವೆ. ಈ ವ್ಯವಸ್ಥೆಯು ಅಸ್ತಿತ್ವದಲ್ಲಿರುವ ಕಡೆಗಳಲ್ಲಿ ಅದರ ಉಪಯುಕ್ತತೆಯು ಸಾಬೀತಾಗಿಲ್ಲವೆಂದು ವಾದಿಸಲಾಗಿದೆ. ಕಮಿಷನರ್‌ಗಳಲ್ಲಿ ಆತ್ಮವಿಶ್ವಾಸದ ಕೊರತೆ, ಅವರ ಅಪರ್ಯಾಪ್ತ (inadequacy) ಅಧಿಕಾರ, ವಿವೇಚನಾಯುತ ಅಧಿಕಾರ ಚಲಾವಣೆಯಲ್ಲಿನ ಮಧ್ಯಪ್ರವೇಶ, ದಸ್ತಾವೇಜುಗಳ ನಿರ್ವಹಣೆಯ ಕೆಲಸದ ಹೊರೆ, ವಿಶಾಲವಾದ

ಕ್ಷೇತ್ರ, ಅಧಿಕಾರದ ಅಲ್ಪಾವಧಿ ಮುಂತಾದವುಗಳೆಲ್ಲವೂ ಒಟ್ಟಿಗೆ ಸೇರಿ ಅವರ ಸ್ಥಾನಮಾನ, ಪಾತ್ರ, ಉಪಯುಕ್ತತೆ ಮತ್ತು ಯಶಸ್ಸುಗಳಲ್ಲಿ ಕುಸಿತವುಂಟಾಗಿರಬಹುದೆಂದು ಎನ್.ಉಮಾಪತಿಯವರು ತಿಳಿಸಿದ್ದಾರೆ. ಎಲ್ಲಾ ವಾದಗಳನ್ನು ಪರಿಶೀಲಿಸಿದ ನಂತರ ಆಡಳಿತಾತ್ಮಕ ಸುಧಾರಣಾ ಸಮಿತಿಯು ವಿಭಾಗೀಯ ಕಮೀಷನರ್‌ಗಳ ಹುದ್ದೆಯನ್ನು ರದ್ದುಪಡಿಸುವಂತೆ ಶಿಫಾರಸ್ಸು ಮಾಡಿದೆ. ಪ್ರಾದೇಶಿಕ ಕಛೇರಿಗಳ ವ್ಯವಸ್ಥೆಯು ಗಂಭೀರವಾದ ಪರಿಶೀಲನೆಗೆ ಒಳಪಟ್ಟಿದೆ. ರಾಜಾಸ್ಥಾನದ ಆಡಳಿತಾತ್ಮಕ ತನಿಖಾ ಸಮಿತಿಯು (1962–63) ಪ್ರಾದೇಶಿಕ ಕಛೇರಿಗಳು ಕಾರ್ಯನಿರ್ವಹಣೆ ಮತ್ತು ಮೌಲ್ಯಮಾಪನದ ಸಂಸ್ಥೆಗಳ ಅವಳಿ ಕಾರ್ಯಗಳನ್ನೂ ತಮ್ಮ ಜೊತೆಗೂಡಿಸಿಕೊಳ್ಳಬೇಕೆಂದು ಭಾವಿಸಿದೆ. ಪ್ರಾದೇಶಿಕ ಕಛೇರಿಗಳು ಕ್ಷೇತ್ರದ ಜನಗಳಿಗೆ ನಿಕಟವಾಗಿರುವುದರಿಂದ ಅವು ಅಂತಿಮ ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಗಮನಾರ್ಹ ಅಧಿಕಾರ ಹೊಂದಿರಬೇಕೆಂಬುದಾಗಿ ಆಡಳಿತಾತ್ಮಕ ಸುಧಾರಣಾ ಸಮಿತಿಯು (1964–65) ಭಾವಿಸುತ್ತದೆ. ಇದಕ್ಕೆ ಭಿನ್ನವಾಗಿ, ಪಂಜಾಬಿನ ಆಡಳಿತಾತ್ಮಕ ಸುಧಾರಣಾ ಸಮಿತಿಯು (1964–66) ಪ್ರಾದೇಶಿಕ ಕಛೇರಿಗಳನ್ನು ತೆಗೆದುಹಾಕುವುದು ಮತ್ತು ಜಿಲ್ಲಾ ಹಂತದ ಕಛೇರಿಗಳ ಸ್ಥಾನಮಾನ ಮತ್ತು ದರ್ಜೆಯನ್ನು ಬಲಗೊಳಿಸುವುದು ಉತ್ತಮವೆಂದು ಭಾವಿಸಿದೆ. ಕೆಲಸ ಕಾರ್ಯದ ಸ್ವರೂಪದ ಹಿನ್ನಲೆಯಲ್ಲಿ ಪ್ರಾದೇಶಿಕ ಕಛೇರಿಗಳ ಅವಶ್ಯಕತೆಯನ್ನು ಪರಿಶೀಲಿಸುವ ಅಗತ್ಯವಿದೆ. ಜಿಲ್ಲಾ ಹಂತದ ಚಟುವಟಿಕೆಗಳ ತಾಂತ್ರಿಕ ಮೇಲ್ವಿಚಾರಣೆ ಅಗತ್ಯವಿದ್ದಲ್ಲಿ, ದಕ್ಷತೆಯ ದೃಷ್ಟಿಯಿಂದ ಪ್ರಾದೇಶಿಕ ಕಛೇರಿಗಳು ಅಗತ್ಯವೆನಿಸಬಹುದು.

ಪ್ರಾದೇಶಿಕ ಕಛೇರಿಗಳ ಬಗ್ಗೆ ರಾಜ್ಯವು ನಿರ್ಧಾರಗಳನ್ನು ತೆಗೆದುಕೊಳ್ಳುವ ಮೊದಲು ಅವುಗಳ ಬಗ್ಗೆ ವಿವರವಾದ ಪುನರ್ವಿಮರ್ಶೆ ಮಾಡಬೇಕೆಂದು ಆಡಳಿತಾತ್ಮಕ ಸುಧಾರಣಾ ಸಮಿತಿಯು ಭಾವಿಸುತ್ತದೆ. ರಾಜ್ಯಗಳಲ್ಲಿ ಪ್ರಾದೇಶಿಕ ಕಛೇರಿಗಳನ್ನು ಸ್ಥಾಪಿಸುವುದಕ್ಕೆ ಅದು ಕೆಳಕಂಡ ಮಾನದಂಡಗಳನ್ನು ರೂಪಿಸಿದೆ:

1) ಸ್ಥಳೀಯ ಕಛೇರಿಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣ ಕಾರ್ಯಗಳು, ಇಲಾಖಾ ಮುಖ್ಯಸ್ಥರು ಪರಿಣಾಮಕಾರಿಯಾಗಿ ನಿರ್ವಹಿಸಲಾಗದಷ್ಟು ಪ್ರಮಾಣದಲ್ಲಿದ್ದಾಗ.
2) ಇಲಾಖಾ ಮುಖ್ಯಸ್ಥರ ಕಛೇರಿಗೆ ಬೇಕಾಗುವ ವ್ಯವಸ್ಥೆಯ ಪ್ರಮಾಣ ಪ್ರಾದೇಶಿಕ ಕಛೇರಿಗಳಿಗೆ ಅದನ್ನು ವರ್ಗಾಯಿಸಲು ತಗಲುವ ವೆಚ್ಚಕ್ಕಿಂತ ಸಾಕಷ್ಟು ಹೆಚ್ಚು ಎನಿಸಿದಾಗ.
3) ಕಾರ್ಯನಿರ್ವಹಣೆಗಳ ಭೌಗೋಳಿಕ ವ್ಯಾಪ್ತಿಯು ವಿಸ್ತೃತವಾಗಿದ್ದು, ಪ್ರವಾಸ ಮತ್ತಿತರ ಕಾರಣಗಳಿಂದಾಗಿ ಕೇಂದ್ರಿಯ ನಿಯಂತ್ರಣದ ಆಡಳಿತಾತ್ಮಕ ವೆಚ್ಚವು ಅಧಿಕವೆನಿಸಿದಾಗ.

4) ಮಧ್ಯಂತರ ಹಂತದಲ್ಲಿನ ಮೇಲ್ವಿಚಾರಣೆ ಮತ್ತು ನಿಯಂತ್ರಣವು ಆಡಳಿತಾತ್ಮಕ ಅಗತ್ಯಗಳು ಮತ್ತು ಕೆಲಸದ ಸ್ವರೂಪವನ್ನು ಆಧರಿಸಿದ್ದಾಗ.

**ವಿಭಾಗೀಯ ಕಮಿಷನರ್**

ವಿಭಾಗೀಯ ಕಮಿಷನರ್, ಅತೀ ಪ್ರಮುಖವಾದ ಪ್ರಾದೇಶಿಕ ಹಂತದ ಕಾರ್ಯನಿರ್ವಾಹಕರಾಗಿದ್ದಾರೆ.

**i) ಕಛೇರಿಯ ಸ್ಥಾನ ಮತ್ತು ವ್ಯಾಪ್ತಿ**

ವಿಭಾಗೀಯ ಕಮಿಷನರ್‌ರವರು ತಮ್ಮ ಉಸ್ತುವಾರಿಯಲ್ಲಿರುವ ಜಿಲ್ಲಾಧಿಕಾರಿಗಳ ಕಾರ್ಯದ ಮೇಲ್ವಿಚಾರಣೆ ನಡೆಸುತ್ತಾರೆ. ಅವರು ವಿಭಾಗೀಯ ಮಟ್ಟದ ಕಾನೂನು ಮತ್ತು ಸುವ್ಯವಸ್ಥೆಯ ಆಡಳಿತ, ಅಭಿವೃದ್ಧಿ ಆಡಳಿತ, ಗ್ರಾಮೀಣಾಭಿವೃದ್ಧಿ ಹಾಗೂ ಕಂದಾಯ ಆಡಳಿತಗಳಂತಹ ವಿಶಾಲ ವ್ಯಾಪ್ತಿಯ ಚಟುವಟಿಕೆಗಳ ಸಮನ್ವಯಕರ್ತರಾಗಿದ್ದಾರೆ. ಆದ್ದರಿಂದ, ವಿಭಾಗೀಯ ಕಮೀಷನರ್‌ರವರು ಮಧ್ಯಂತರ (ಪ್ರಾದೇಶಿಕ) ಮಟ್ಟದ ಆಡಳಿತ ವ್ಯವಸ್ಥೆಯಲ್ಲಿ ಮಹತ್ವಪೂರ್ಣ ಸ್ಥಾನವನ್ನು ಹೊಂದಿರುತ್ತಾರೆ.

**ಸಂಸ್ಥೆಯ ವೃತ್ತಿ ಜೀವನದ ಏಳು ಬೀಳುಗಳು**

ದೇಶದಲ್ಲಿನ ವಿಭಾಗೀಯ ಕಮಿಷನರ್‌ರವರ ಕಛೇರಿಯ ವೃತ್ತಿ ಮಾರ್ಗವು ಏಳುಬೀಳುಗಳನ್ನೊಳಗೊಂಡಿದೆ. ಸ್ವಾತಂತ್ರ್ಯಾನಂತರ ಅನೇಕ ರಾಜ್ಯಗಳಲ್ಲಿ ರದ್ದುಪಡಿಸುವಿಕೆ ಮತ್ತು ಪುನಃಸ್ಥಾಪನೆಗಳ ಪರಂಪರೆಯನ್ನು ಅದು ಕಂಡಿದೆ. ಮಧ್ಯಪ್ರದೇಶ ಮತ್ತು ಹಳೆಯ ಮುಂಬೈ ರಾಜ್ಯಗಳು ಅನುಕ್ರಮವಾಗಿ 1948 ಮತ್ತು 1950ರಲ್ಲಿ ಅದನ್ನು ರದ್ದುಗೊಳಿಸಿದ್ದವು. ಆದರೂ, ಮಧ್ಯಪ್ರದೇಶದಲ್ಲಿ 1956ರಲ್ಲಿ ಹಾಗೂ ಮುಂಬೈನಲ್ಲಿ 1958ರಲ್ಲಿ ಕಮಿಷನರ್‌ಗಿರಿಯನ್ನು ಪುನಃಸ್ಥಾಪಿಸಲಾಯಿತು. 1961ರಲ್ಲಿ ರಾಜಾಸ್ಥಾನವು ಈ ಸಂಸ್ಥೆಯನ್ನು ರದ್ದುಗೊಳಿಸಿತು. ಉತ್ತರಪ್ರದೇಶವು ಈ ನಿಟ್ಟಿನಲ್ಲಿ ಅರ್ಧ ದಾರಿಯನ್ನು ಕ್ರಮಿಸಿ, ಕಮಿಷನರ್‌ರವರ ಸಂಖ್ಯೆಯನ್ನು ಕಡಿತಗೊಳಿಸಿ, ಅವರುಗಳ ಭೌಗೋಳಿಕ ಅಧಿಕಾರ ವ್ಯಾಪ್ತಿಯನ್ನು ಹೆಚ್ಚಿಸಿತು. ಸ್ವಲ್ಪ ಸಮಯದಲ್ಲೇ ಅದು ಪೂರ್ವಸ್ಥಿತಿಯನ್ನು ಪುನರ್ ಸ್ಥಾಪಿಸಿತು. ಹಾಗೆಯೇ, ಮಹಾರಾಷ್ಟ್ರದಲ್ಲಿ ಕಮಿಷನರ್ ಹುದ್ದೆಯನ್ನು ರದ್ದುಗೊಳಿಸಿದಾಗ್ಯೂ, ನಂತರದಲ್ಲಿ ಪುನಃಸ್ಥಾಪನೆಗೊಳಿಸಲಾಯಿತು.

### ii) ವಿಭಾಗೀಯ ಕಮಿಷನರ್‌ನ ಕಾರ್ಯಗಳು

- ಜಿಲ್ಲಾ ಹಂತದ ಅಧಿಕಾರಿಗಳಿಗೆ ಮಾರ್ಗದರ್ಶನ ನೀಡುವ ಮತ್ತು ರಾಜ್ಯದ ಪ್ರಧಾನ ಕಾರ್ಯಾಲಯಕ್ಕೆ ಹಿಮ್ಮಾಹಿತಿ ಮತ್ತು ಸಲಹೆಯನ್ನು ನೀಡುವ ಸಮಗ್ರ ಪ್ರಾದೇಶಿಕ ಅಧಿಕಾರಿಯೇ ವಿಭಾಗೀಯ ಕಮಿಷನರ್.
- ಅವರು ಸಮನ್ವಯ, ಮೇಲ್ವಿಚಾರಣೆ, ತನಿಖೆ ಮತ್ತು ಮನವಿ ಸ್ವೀಕೃತಿಯ ಕಾರ್ಯಗಳಲ್ಲಿ ಪ್ರಧಾನವಾಗಿ ತೊಡಗಿಸಿಕೊಳ್ಳುತ್ತಾರೆ.
- ಕಂದಾಯ ಆಡಳಿತದ ಕ್ಷೇತ್ರದಲ್ಲಿ, ವಿಭಾಗೀಯ ಕಮಿಷನರ್‌ರವರ ಕರ್ತವ್ಯಗಳು ಬಹುರೂಪದ್ದಾಗಿದೆ. ಭೂ ಕಂದಾಯದ ವಿಷಯಗಳಲ್ಲಿ ಸ್ಪಷ್ಟವಾಗಿ ನಿರೂಪಿಸಲಾದ ಅಧಿಕಾರವನ್ನು ಅವರು ಹೊಂದಿದ್ದು, ಜಿಲ್ಲಾ ಕಲೆಕ್ಟರ್‌ಗಳ ಕಂದಾಯ ಸಂಬಂಧಿತ ನಿರ್ಣಯಗಳ ವಿರುದ್ಧದ ಅಪೀಲುಗಳನ್ನು ಅವರು ಆಲಿಸುತ್ತಾರೆ. ಅವರು ತಮ್ಮ ವಿಭಾಗದ ವ್ಯಾಪ್ತಿಯಲ್ಲಿನ ಕಂದಾಯ ಕಛೇರಿಗಳ ತನಿಖೆ ನಡೆಸುತ್ತಾರೆ. ಕಂದಾಯದ ವಿಷಯಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದೊಂದಿಗಿನ ಎಲ್ಲಾ ಸಂವಹನಗಳು ಇವರ ಮೂಲಕ ಸಾಗುತ್ತವೆ. ಭೂ ಸುಧಾರಣೆಗಳಿಗೆ ಸಂಬಂಧಿಸಿದಂತೆಯೂ ಅವರಿಗೆ ಜವಾಬ್ದಾರಿಗಳಿರುತ್ತದೆ.
- ಕಮಿಷನರ್‌ರವರು ಗ್ರಾಮೀಣ ಅಭಿವೃದ್ಧಿ ಕ್ಷೇತ್ರಕ್ಕೆ ಸಂಬಂಧಿಸಿದಂತೆಯೂ ಜವಾಬ್ದಾರಿಗಳನ್ನು ಹೊಂದಿರುತ್ತಾರೆ.
- ಗ್ರಾಮೀಣ ಮತ್ತು ನಗರ ಪ್ರದೇಶಗಳ ಸ್ಥಳೀಯ ಸ್ವಾಯತ್ತ ಸರ್ಕಾರದ ಕಾರ್ಯಕ್ಷೇತ್ರಕ್ಕೆ ಸಂಬಂಧಿಸಿದಂತೆ ಕಮಿಷನರ್ ಅವರಿಗೆ ಕೆಲವು ಅಧಿಕಾರಗಳನ್ನು ಕೊಡಲಾಗಿದೆ.
- ಕಮಿಷನರ್‌ರವರು ತಮ್ಮ ವಿಭಾಗದ ಕಾನೂನು ಮತ್ತು ಸುವ್ಯವಸ್ಥೆಯ ಬಗ್ಗೆ ನೇರ ಜವಾಬ್ದಾರಿ ಹೊಂದಿರುತ್ತಾರೆ. ಅವರು ತಮ್ಮ ಅಧೀನದಲ್ಲಿರುವ ಪ್ರದೇಶದ ಕಾನೂನು ಮತ್ತು ಸುವ್ಯವಸ್ಥೆಯ ಆಡಳಿತದ ಮುಖ್ಯಸ್ಥರಾಗಿದ್ದಾರೆ.

### iii) ವಿಭಾಗೀಯ ಕಮಿಷನರ್‌ಗಿರಿ: ಒಂದು ವಿವಾದಾಸ್ಪದ ಹುದ್ದೆ – ವಿವಾದಕ್ಕೆ ಪೂರಕವಾದ ಅಂಶಗಳು:

ಕಮಿಷನರ್‌ರವರ ಕಛೇರಿಯು ಸಾಕಷ್ಟು ವಿವಾದಗಳಿಗೆ ಗುರಿಯಾಗಿದೆ. ಎರಡು ವಿಶಿಷ್ಟ ಬಗೆಯ ಆಲೋಚನಾ ಪಂಥಗಳ (ಒಂದು ಅದರ ಪರವಾಗಿ ಮತ್ತೊಂದು ಅದರ ವಿರುದ್ಧವಾಗಿ) ಉದಯವನ್ನು ಕಾಣಬಹುದು. ಅದನ್ನು ಬೆಂಬಲಿಸುವವರು, ಮಧ್ಯಂತರದ ಸ್ತರದ ಪ್ರಬಲ ಆಡಳಿತದ ಸೃಜನೆಯು ವಿಕೇಂದ್ರಿಕರಣವನ್ನು ಪ್ರೋತ್ಸಾಹಿಸುತ್ತದೆ ಮತ್ತು ರಾಜ್ಯದ ಆಡಳಿತವನ್ನು ಭೌತಿಕವಾಗಿ ಮತ್ತು ಮನೋವೈಜ್ಞಾನಿಕವಾಗಿ ತಳಮಟ್ಟದ ಪ್ರಜೆಗಳ ಸಮೀಪಕ್ಕೆ ತರುತ್ತದೆಯೆಂದು ವಾದಿಸುತ್ತಾರೆ. ಇದಲ್ಲದೆ, ಕ್ಷೇತ್ರ ಸಂಸ್ಥಾಪನೆಯ ಸಮನ್ವಯ ಮತ್ತು ಮೇಲ್ವಿಚಾರಣೆಯಲ್ಲಿ ಸುಧಾರಣೆಯನ್ನು ಸಾಧಿಸಬಹುದಾಗಿದೆ. ಅದರ ವಿರುದ್ಧವಾಗಿ ವಾದಿಸುವವರು ಮತ್ತು ಅದನ್ನು ರದ್ದುಗೊಳಿಸಬೇಕೆಂದು ಶಿಫಾರಸ್ಸು ಮಾಡುವವರು ಮಧ್ಯಂತರ ಹಂತದ ಆಡಳಿತದ ಸೃಜನೆಯು ಜಿಲ್ಲಾ ಕಾರ್ಯನಿರ್ವಾಹಕರುಗಳ ಮುಂತೊಡಗನ್ನು ಮತ್ತು ಜವಾಬ್ದಾರಿಯನ್ನು ನಿಗ್ರಹಿಸುತ್ತದೆ ಎಂದು ಸಮರ್ಥಿಸುತ್ತಾರೆ. ವಿಭಾಗೀಯ ಅಧಿಕಾರಿಗಳ ವ್ಯವಸ್ಥೆಯನ್ನು ಹೊಂದಿರುವ ರಾಜ್ಯಗಳು ದಕ್ಷತೆ ಅಥವಾ ನಿರ್ವಹಣೆಯ ವೇಗದಲ್ಲಿ ಯಾವುದೇ ಗಮನಾರ್ಹ ಸುಧಾರಣೆಯನ್ನು ಸಾಧಿಸಿರುವುದಿಲ್ಲ. ಸಮನ್ವಯತೆಯು ಸಹ ಯಾವುದೇ ಉಪಯುಕ್ತ ಫಲಿತಾಂಶಗಳನ್ನು ಸಾಧಿಸಿದಂತೆ ತೋರುವುದಿಲ್ಲ. ಇದಲ್ಲದೆ, ಇತ್ತೀಚಿನ ದಿನದಲ್ಲಿ ಮಂತ್ರಿಗಳು ಆಗಿಂದಾಗ್ಗೆ ಜಿಲ್ಲಾ ಪ್ರವಾಸ ಕೈಗೊಳ್ಳುವುದರಿಂದ, ಸಮನ್ವಯತೆಯ ಸಮಸ್ಯೆಗಳನ್ನು ಸರಾಗವಾಗಿ ಗುರುತಿಸಬಹುದಾಗಿದೆ. ತ್ವರಿತವಾಗಿ ಸಂಪರ್ಕಿಸಬಹುದಾದ ಸೌಲಭ್ಯಗಳಿಂದಾಗಿ; ಕಲೆಕ್ಟರ್‌ರವರು ಅಗತ್ಯವಿದ್ದಾಗ, ಸುಲಭವಾಗಿ ಪ್ರಧಾನ ಕಾರ್ಯಾಲಯವನ್ನು ಸಂಪರ್ಕಿಸಬಹುದಾಗಿದೆ. ಹಾಗಾಗಿ, ವಿಷಯಗಳನ್ನು ಮಧ್ಯಂತರ ಪ್ರಾಧಿಕಾರ ಗಮನಕ್ಕೆ ತರುವ ಅಗತ್ಯವಿರುವುದಿಲ್ಲ.

ನಾವೀಗ ವಿಭಾಗೀಯ ಅಧಿಕಾರಿಗಳ ಕಛೇರಿಯ ಪರ ಮತ್ತು ವಿರೋಧದ ವಾದಗಳನ್ನು ಸಂಕ್ಷೇಪಿಸಬಹುದಾಗಿದೆ.

**ಪರವಾಗಿರುವ ವಾದಗಳು**

ಜಿಲ್ಲಾಡಳಿತವನ್ನು ಕುರಿತ ತನ್ನ ವರದಿಯಲ್ಲಿ ಈ ಕೆಳಗಿನ ಅಂಶಗಳನ್ನು ಆಧರಿಸಿ ವಿಭಾಗೀಯ ಕಮಿಷನರ್‌ರವರ ಕಛೇರಿಯ ಪರ ಎ.ಆರ್.ಸಿ. (ಆಡಳಿತಾತ್ಮಕ ಸುಧಾರಣಾ ಸಮಿತಿ) ಅಧ್ಯಯನ ತಂಡವು ವಾದವನ್ನು ಮಂಡಿಸಿದೆ:

1) ವಿಭಾಗೀಯ ಕಮಿಷನರ್‌ರವರ ಉಪಸ್ಥಿತಿಯು ವಿವಿಧ ಅಭಿವೃದ್ಧಿ ಇಲಾಖೆಗಳ ಪ್ರಾದೇಶಿಕ ಹಂತದ ಅಧಿಕಾರಿಗಳ ಸಮನ್ವಯವನ್ನು ಸುಲಲಿತಗೊಳಿಸುತ್ತದೆ. ರಾಜ್ಯದ ಪ್ರಧಾನ ಕಾರ್ಯಾಲಯವು ತೀರಾ ದೂರದಲ್ಲಿರುವುದರಿಂದ ಆ ರೀತಿಯ ಸಮನ್ವಯತೆ ಸಾಧಿಸಲು ಸಾಧ್ಯವಿಲ್ಲ. ಪ್ರಾದೇಶಿಕ ಸಮಸ್ಯೆಗಳ ನಿಕಟ ಅರಿವನ್ನು ಹೊಂದಿರುವ ಅಧಿಕಾರಿಯು ಮಾತ್ರ ಇದನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಾಧ್ಯ.

2) ಉತ್ತರ ಪ್ರದೇಶ ಮತ್ತು ಮಧ್ಯ ಪ್ರದೇಶಗಳಂತಹ ವಿಶಾಲ ರಾಜ್ಯಗಳಲ್ಲಿ ಪ್ರಾದೇಶಿಕ ನೆಲೆಯನ್ನುಳ್ಳ ಅಧಿಕಾರಿಯು ಇದನ್ನು ನಿರ್ವಹಿಸದಿದ್ದಲ್ಲಿ, ಕಲೆಕ್ಟರ್‌ಗಳ ಪರಿಣಾಮಕಾರಿ ಮೇಲ್ವಿಚಾರಣೆ ನಡೆಸಲು ಸಾಧ್ಯವಿಲ್ಲ.

3) ಮಧ್ಯಂತರ ಹಂತದಲ್ಲಿನ ವಿಭಾಗೀಯ ಅಧಿಕಾರಿಯ ಉಪಸ್ಥಿತಿಯು ರಾಜ್ಯ ಹಂತದಿಂದ ಕೈಗೊಳ್ಳುವ ನಿಯೋಜನೆಯನ್ನು ಪ್ರೋತ್ಸಾಹಿಸುತ್ತದೆ. ಇದು ಪ್ರಕರಣಗಳ ಶೀಘ್ರ ವಿಲೇವಾರಿಯನ್ನು ಮತ್ತು ಜನರಿಗೆ ಆಡಳಿತದ ಸುಲಭ ಲಭ್ಯತೆಯನ್ನು ಸಾಧ್ಯವಾಗಿಸುತ್ತದೆ.

4) ಪಂಚಾಯತಿ ರಾಜ್ ಸಂಸ್ಥೆಗಳಿಗೆ ಮತ್ತಷ್ಟು ಯಥಾಯೋಗ್ಯ (adequate) ಮಾರ್ಗದರ್ಶನವನ್ನು ಒದಗಿಸಲು ವಿಭಾಗೀಯ ಕಮಿಷನರ್‌ರವರ ಉಪಸ್ಥಿತಿಯನ್ನು ಬಳಸಿಕೊಳ್ಳಬಹುದು. ಪಂಚಾಯತಿ ರಾಜ್ ಸಂಸ್ಥೆಗಳು, ಪ್ರಾದೇಶಿಕ ಮತ್ತು ರಾಜ್ಯ ಮಟ್ಟದ ಏಜೆನ್ಸಿಗಳ ನಡುವಿನ ಸಮನ್ವಯವನ್ನು ಸುರಳಿತಗೊಳಿಸಲು ಸಹ ಇವರನ್ನು ಬಳಸಿಕೊಳ್ಳಬಹುದಾಗಿದೆ.

5) ಸಾಕಷ್ಟು ಆಡಳಿತಾತ್ಮಕ ಅನುಭವವಿರುವ ಪ್ರಾದೇಶಿಕ ನೆಲೆಯನ್ನುಳ್ಳ ಅಧಿಕಾರಿಯು ಪ್ರಾದೇಶಿಕ ಯೋಜನೆ ಮತ್ತು ಕಾರ್ಯಾನ್ವಯನದ ವೇಗವರ್ಧಕವಾಗಿ ಕೆಲಸ ಮಾಡುತ್ತಾನೆ.

6) ಕಮಿಷನರ್ ಮಟ್ಟದ ಸೇವಾಹಿರಿತನ ಮತ್ತು ಅನುಭವವನ್ನು ಹೊಂದಿರುವ ಆಡಳಿತಗಾರನು, ಆ ವಿಭಾಗದ ಕಿರಿಯ ಐ.ಎ.ಎಸ್. ಅಧಿಕಾರಿ ಮತ್ತು ರಾಜ್ಯದ ಸಿವಿಲ್ ಸೇವಾ ಅಧಿಕಾರಿಗಳಿಗೆ ಉಪಯುಕ್ತ ತರಬೇತಿಯನ್ನು ನೀಡುವ ಪಾತ್ರವನ್ನು ನಿರ್ವಹಿಸಬಹುದಾಗಿದೆ.

**ವಿರೋಧಿ ವಾದಗಳು**

ಬಂಗಾಳದ ಆಡಳಿತ ಪರಿಶೀಲನಾ ಸಮಿತಿಯಲ್ಲಿ ತಿಳಿಸಲ್ಪಟ್ಟ ವಿಭಾಗೀಯ ಕಮಿಷನರ್ ಹುದ್ದೆಗೆ ಸಂಬಂಧಿಸಿದ ವಿರೋಧಿ ವಾದಗಳು ಹೀಗಿವೆ:

1) ಜಿಲ್ಲಾ ಮಟ್ಟದಲ್ಲಿ ಸರ್ಕಾರದ ಚಟುವಟಿಕೆಗಳು ದೊಡ್ಡ ಪ್ರಮಾಣದಲ್ಲಿ ಹಾಗೂ ಸಂಕೀರ್ಣವಾಗಿ ಬೆಳೆದಿರುವುದರಿಂದ ವಿಭಾಗವು ಮೇಲ್ವಿಚಾರಣೆಯ ಉದ್ದೇಶಕ್ಕೆ ಸೂಕ್ತವಾದ ಕ್ಷೇತ್ರೀಯ ಘಟಕವಲ್ಲ. ಪರಿಣಾಮಕಾರಿ ಆಡಳಿತ ಘಟಕವೆನಿಸಿಕೊಳ್ಳಲು ಅದು ತೀರಾ ವಿಶಾಲ ಕ್ಷೇತ್ರವಾಗಿದೆ.
2) ಜಿಲ್ಲೆಗಳ ಮೇಲುಸ್ತುವಾರಿ ನಡೆಸುವ ಮತ್ತು ಕಂದಾಯ ಸಂಸ್ಥೆಗಳ ಮೇಲ್ಮನವಿ ಸ್ವೀಕರಿಸುವ ನಿಟ್ಟಿನಲ್ಲಿ ಕಮಿಷನರ್‌ಗಳು ಅಂದಾಜಿಗೆ ನಿಲುಕದಷ್ಟು ದುಬಾರಿಯೆನಿಸಿದ್ದಾರೆ.

3) ಮಧ್ಯಂತರ ಆಡಳಿತ ಮಟ್ಟದಲ್ಲಿ ಕಮಿಷನರ್‌ಗಳು ಕೆಲಸ ಕಾರ್ಯದ ಇತ್ಯರ್ಥದಲ್ಲಿ ಹೆಚ್ಚು ಉಪಯುಕ್ತ ಪಾತ್ರ ನಿರ್ವಹಿಸುವುದು ಅಥವಾ ನಿರ್ದಿಷ್ಟ ಕೊಡುಗೆಯನ್ನು ನೀಡುವುದು ಅನುಮಾನಾಸ್ಪದವೆನಿಸಿದೆ. ಕೇವಲ ಅಂಚೆ ಕಛೇರಿಯೊಂದರ ಸ್ಥಾನಕ್ಕೆ ಆ ಹುದ್ದೆಯನ್ನು ಇಳಿಸಲಾಗಿದೆ ಹಾಗೂ ಅದು ಜನಸಾಮಾನ್ಯರ ವ್ಯವಹಾರಗಳನ್ನು ವಿಳಂಬಿಸುವ ಕಾಣಿಕೆಯನ್ನಷ್ಟೇ ನೀಡುತ್ತಿದೆ.

4) ಕಮಿಷನರ್‌ಗಳು ವ್ಯಾಪಕ ಮತ್ತು ಪರಿಪಕ್ವ ಅನುಭವವುಳ್ಳ ಅಧಿಕಾರಿಗಳಾಗಿರುವುದರಿಂದ ಪ್ರಧಾನ ಕಾರ್ಯಾಲಯಗಳಲ್ಲಿ ಅವರ ಲಭ್ಯತೆಯು ಮಹತ್ವಪೂರ್ಣ ಅನುಭವದ ಪರಿಪೂರ್ಣ ಬಳಕೆಗೆ ಅವಕಾಶ ಮಾಡಿಕೊಡುತ್ತದೆ. ಕಮಿಷನರ್‌ಗಳ ಸೇವಾಹಿರಿತನ ಮತ್ತು ಅನುಭವವನ್ನು ಹೊಂದಿರುವ ಅಧಿಕಾರಿಗಳಿಗೆ ಉಪಯುಕ್ತ ಆದ್ಯಕರ್ತವ್ಯವನ್ನು (preoccupaion) ಒದಗಿಸುವಲ್ಲಿ ವಿಭಾಗೀಯ ಆಡಳಿತವು ವಿಫಲವಾಗಿದೆ.

**ನಿಮ್ಮ ಪ್ರಗತಿಯನ್ನು ಪರಿಶೀಲಿಸಿ–1**

**ಸೂಚನೆ:**

i) ನಿಮ್ಮ ಉತ್ತರವನ್ನು ಬರೆಯಲು ಕೆಳಗೆ ಒದಗಿಸಿರುವ ಜಾಗವನ್ನು ಬಳಸಿ.

ii) ಈ ವಿಭಾಗದ ಅಂತ್ಯದಲ್ಲಿ ಒದಗಿಸಿರುವ ಉತ್ತರದೊಂದಿಗೆ ನಿಮ್ಮ ಉತ್ತರಗಳನ್ನು ಪರಿಶೀಲಿಸಿ.

1) ಪ್ರಾದೇಶಿಕ ಆಡಳಿತದ ಅರ್ಥವನ್ನು ಚರ್ಚಿಸಿ:

2) ವಿಭಾಗೀಯ ಕಮಿಷನರ್‌ರವರ ಪಾತ್ರವನ್ನು ವಿವರಿಸಿ:

3) ವಿಭಾಗೀಯ ಕಮಿಷನರ್‌ಗಿರಿಯ ಪರವಾದ ವಾದಗಳನ್ನು ತಿಳಿಸಿ.

## 16.4 ಜಿಲ್ಲಾಡಳಿತದ ವಿಕಾಸ

ಕ್ಷೇತ್ರಾಡಳಿತದ ಒಂದು ಮೂಲ ಘಟಕವಾಗಿ ಜಿಲ್ಲೆಯು ಸಾಕಷ್ಟು ವರ್ಷಗಳಿಂದ ಅಸ್ತಿತ್ವದಲ್ಲಿದೆ. ವಿಭಾಗೀಯ ಮಟ್ಟಕ್ಕಿಂತಲೂ ಕೆಳ ಹಂತದಲ್ಲಿರುವ ಜಿಲ್ಲೆಯು ಒಂದು ಕ್ಷೇತ್ರಿಯ ಘಟಕವಾಗಿದೆ. ಆಳ್ವಿಕೆಯ ಉದ್ದೇಶಕ್ಕೋಸ್ಕರ ಎಲ್ಲಿ ಆಡಳಿತಾತ್ಮಕ ಕಾರ್ಯಾಚರಣೆಗಳನ್ನು ಕೇಂದ್ರೀಕರಿಸಲು ಸಾಧ್ಯವೋ

ಅಲ್ಲಿ ಜಿಲ್ಲೆಯನ್ನು ಅತ್ಯಂತ ಅನುಕೂಲಕರವಾದ ಘಟಕವೆಂದು ಇತಿಹಾಸದಾದ್ಯಂತ ಪರಿಗಣಿಸಲಾಗಿದೆ. ಆಡಳಿತಾತ್ಮಕ ಅಗತ್ಯಗಳಿಗನುಗುಣವಾಗಿ ಅಧಿಕಾರ ಸ್ವರೂಪವು ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಬಂದಿದೆ ಎನ್ನುವುದರಲ್ಲಿ ಅನುಮಾನವಿಲ್ಲ. ದಾಳಿಗಳು, ದಿಗ್ವಿಜಯಗಳು, ರಾಜ್ಯಾಡಳಿತದ ಮತ್ತು ಆಡಳಿತಾತ್ಮಕ ಬದಲಾವಣೆಗಳು ಆಡಳಿತದ ಈ ಮೂಲಭೂತ ಘಟಕದ ಮೇಲೆ ಯಾವುದೇ ಪರಿಣಾಮವನ್ನು ಬೀರಿಲ್ಲ. ದಶಕದಾದ್ಯಂತ, ರಾಜ್ಯಾಡಳಿತದ ಮತ್ತು ಆಡಳಿತಾತ್ಮಕ ಅಗತ್ಯಗಳನ್ನು ಪೂರೈಸಲು ಅನೇಕ ಜಿಲ್ಲೆಗಳನ್ನು ದ್ವಿಭಾಗ ಮಾಡಲಾಗಿದೆ ಮತ್ತು ಪುನರ್ವ್ಯವಸ್ಥೆಗೊಳಿಸಲಾಗಿದೆ. ಆದಾಗ್ಯೂ, ಜಿಲ್ಲೆಯನ್ನು ಒಂದು ಆಡಳಿತಾತ್ಮಕ ಘಟಕವನ್ನಾಗಿ ಮುಂದುವರಿಸಲು ಇದು ಪ್ರಭಾವ ಬೀರಿಲ್ಲ. ಮನುವಿನ ಕಾಲದಿಂದಲೂ ಅದು ಹೆಚ್ಚೇನು ಬದಲಾಗಿಲ್ಲ. ಮನುಸ್ಮೃತಿಯು ಗ್ರಾಮವನ್ನು ಒಂದು ಮೂಲ ಘಟಕವೆಂಬುದಾಗಿ ವಿವರಿಸಿದೆ. ಸುಮಾರು 1000 ಗ್ರಾಮಗಳನ್ನು ಜಿಲ್ಲೆಯಾಗಿ ಒಟ್ಟುಗೂಡಿಸಿ ಅವುಗಳನ್ನು ಒಬ್ಬ ಅಧಿಕಾರಿಯ ಉಸ್ತುವಾರಿಯಲ್ಲಿ ಇಡಲಾಗಿತ್ತು. ಮಹತ್ವದ ಅಂಶವೆಂದರೆ, ಭಾರತದಲ್ಲಿ ಇಂದಿಗೂ ಅನೇಕ ಜಿಲ್ಲೆಗಳಲ್ಲಿನ ಗ್ರಾಮಗಳ ಸಂಖ್ಯೆಯಲ್ಲಿ ಏಕರೂಪತೆಯಿದೆ. ರಾಷ್ಟ್ರದ ಪ್ರಾದೇಶಿಕ ಆಡಳಿತದ ಸಂರಚನೆಯನ್ನು ಮೌರ್ಯರ ಯುಗದಲ್ಲಿ ಗುರುತಿಸಬಹುದಾಗಿದೆ. ಸುಮಾರು 2,500 ವರ್ಷಗಳ ಹಿಂದೆ ಮೌರ್ಯರು ಉತ್ತಮ ಆಡಳಿತಕ್ಕೋಸ್ಕರ ಆಡಳಿತಾತ್ಮಕ ಸಂರಚನೆಯನ್ನು ಪ್ರಾರಂಭಿಸಿದರು. ಈ ವ್ಯವಸ್ಥೆಯು 'ಗ್ರಾಮಗಳೆಂದು' ಕರೆಯಲ್ಪಡುವ ಕಂದಾಯದ ಹಳ್ಳಿಗಳನ್ನು, 'ಸ್ಥಾನ' ಎಂದು ಕರೆಯಲಾಗುವ ಕಂದಾಯದ ಹಳ್ಳಿಗಳ ಗುಂಪನ್ನು, (ವಿಸಯ ಅಥವಾ ತಾಲ್ಲೂಕು) 'ಅಹರಸ್' ಅಥವಾ ಜಿಲ್ಲೆಯೆಂದು ಕರೆಯಲಾಗುವ ವಿವಿಧ ಸ್ಥಾನಗಳನ್ನು, 'ಪ್ರದೇಶ' ಅಥವಾ ವಲಯವೆಂದು ಕರೆಯಲ್ಪಡುವ ಅಹರಸ್‌ಗಳ ಗುಂಪನ್ನು ಮತ್ತು 'ಜನಪದ' ಅಥವಾ ಪ್ರಾಂತಗಳೆಂದು ಕರೆಯಲಾಗುವ ಅನೇಕ ಪ್ರದೇಶಗಳನ್ನು ಒಳಗೊಂಡಿದೆ. ಗುಪ್ತರ ಕಾಲದಲ್ಲಿಯೂ ಅದೇ ರೀತಿಯ ಆಡಳಿತಾತ್ಮಕ ಘಟಕಗಳಿದ್ದು, ಸಾಮ್ರಾಜ್ಯವನ್ನು ದೇಸಗಳೆಂದು, ದೇಸಗಳನ್ನು ಭುಕ್ತಿಗಳೆಂದು ಮತ್ತು ಭುಕ್ತಿಗಳನ್ನು ವಿಸಯಗಳೆಂದೂ ವಿಭಜಿಸಲಾಗಿತ್ತು. ದೇಸಗಳು, ಭುಕ್ತಿಗಳು ಮತ್ತು ವಿಸಯಗಳನ್ನು ಕ್ರಮವಾಗಿ ಇಂದಿನ ರಾಜ್ಯಗಳು, ವಿಭಾಗಗಳು ಮತ್ತು ಜಿಲ್ಲೆಗಳಿಗೆ ಸ್ಥೂಲವಾಗಿ ಹೋಲಿಸಬಹುದಾಗಿದೆ. 'ವಿಸಯಪತಿ' ಎಂಬ ಜಿಲ್ಲಾಡಳಿತದ ಮುಖ್ಯಸ್ಥರು ಕಂದಾಯ ಇಲಾಖೆ ಮತ್ತು ಪೊಲೀಸರ ಕಾರ್ಯಗಳೆರಡನ್ನೂ ನಿರ್ವಹಿಸುತ್ತಿದ್ದು, ಅವರನ್ನು ಪ್ರಸ್ತುತದ ಜಿಲ್ಲಾಧಿಕಾರಿಗೆ ಹೋಲಿಸಬಹುದಾಗಿದೆ. ಮೊಗಲರ ಕಾಲದಲ್ಲಿಯೂ ಸ್ಥಾನೀಯ ಪುರುಷನೊಬ್ಬನಿಗೆ ನಿಯೋಜಿಸಲ್ಪಟ್ಟ ಅಧಿಕಾರವನ್ನು ಆಧರಿಸಿದ ಅದೇ ರೀತಿಯ ಜಿಲ್ಲಾಡಳಿತವನ್ನು ಕಾಣಬಹುದು. ಮೊಗಲರ ಸಾಮಾಜ್ಯವನ್ನು ಸುಭಗಳೆಂದು, ಸುಭಗಳನ್ನು ಸರ್‌ಕಾರ್‌ಗಳೆಂದು ಮತ್ತು ಸರ್‌ಕಾರ್‌ಗಳನ್ನು

ಪರಗಣಗಳೆಂದು ವಿಭಾಗಿಸಲಾಗಿತ್ತು. ಬ್ರಿಟಿಷರು ಮೊಗಲರ ಆಡಳಿತ ಪದ್ಧತಿಯನ್ನು ಅನುಸರಿಸಿದರು. ಈಸ್ಟ್ ಇಂಡಿಯಾ ಕಂಪನಿಯ ಕಾಲದಲ್ಲಿ ಆಡಳಿತ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅನೇಕ ಪ್ರಯೋಗಗಳನ್ನು ಮಾಡಲಾಯಿತು. 1781ರಲ್ಲಿ ಜಿಲ್ಲಾ ಮುಖ್ಯಸ್ಥರಾಗಿ ಜಿಲ್ಲಾ ಕಲೆಕ್ಟರ್‌ರವರ ಅಧೀನದಲ್ಲಿ ಜಿಲ್ಲೆಯು ಪುನಃ ಆಡಳಿತದ ಘಟಕವಾಯಿತು. ಕ್ಷೇತ್ರೀಯ ತಜ್ಞತೆ ಎಂಬ ಪರಿಕಲ್ಪನೆಯು ಸ್ಥೂಲವಾಗಿ, ಭಾರತೀಯ ಆಡಳಿತ ವ್ಯವಸ್ಥೆಯ ಪ್ರಮುಖ ಲಕ್ಷಣವಾಗಿ ಪರಿಣಮಿಸಿತು. ಹೀಗೆ, ಪ್ರಸ್ತುತದಲ್ಲಿನ ಜಿಲ್ಲಾಡಳಿತವು ಚಾರಿತ್ರಿಕ ಆಧಾರಗಳನ್ನು ಹೊಂದಿದೆ. ಈ ವಿಷಯದ ಬಗ್ಗೆ 1930ರಲ್ಲಿ ಸೈಮನ್ ಆಯೋಗವು ನೀಡಿದ ಹೇಳಿಕೆಯು ಹೀಗಿದೆ: ಈ ವ್ಯವಸ್ಥೆಯು ಸ್ವಲ್ಪಮಟ್ಟಿನ ಗತಕಾಲೀನ ಆಧಾರವನ್ನು ಹೊಂದಿದೆ. ಉದಾಹರಣೆಗೆ, ಅಕ್ಬರನು ಬಂಗಾಳದ ಸಮಗ್ರ ಭಾಗವನ್ನು ಸರ್‌ಕಾರ್‌ಗಳೆಂದು ಉಪವಿಭಾಗ ಮಾಡಿದ್ದಾನೆ. ಪ್ರಬಲ ಮತ್ತು ಸ್ಥಿರವಾದ ಆಡಳಿತವು ಬ್ರಿಟಿಷ್ ಅಧಿಕಾರಾವಧಿಯಲ್ಲಿ ಕಂಡುಬಂದಿತು.

ಸ್ವಾತಂತ್ರ್ಯ ಮತ್ತು ಕ್ಷೇಮಾಭ್ಯುದಯ ರಾಜ್ಯದ ಸ್ವೀಕಾರವು, ಜಿಲ್ಲಾಡಳಿತದ ಪರಿಕಲ್ಪನೆಯನ್ನು ಕುರಿತಂತೆ ಆಮೂಲಾಗ್ರ ನೂತನ ದೃಷ್ಟಿಕೋನದ ಅವಶ್ಯಕತೆಯನ್ನು ಉಂಟುಮಾಡಿತು. ಅಭಿವೃದ್ಧಿ ಆಡಳಿತದ ಬಗ್ಗೆ ಹೆಚ್ಚಿನ ಮಹತ್ವವನ್ನು ನೀಡಲಾಗುತ್ತಿದೆ. ಗ್ರಾಮೀಣಾಭಿವೃದ್ಧಿಗೆ, ಸಮುದಾಯ ಅಭಿವೃದ್ಧಿ ಕಾರ್ಯಕ್ರಮವು ಸಾಂಸ್ಥಿಕ ವ್ಯವಸ್ಥೆಯನ್ನು ಸೃಷ್ಟಿಸಿದೆ. ಗ್ರಾಮ, ಬ್ಲಾಕ್ ಮತ್ತು ಜಿಲ್ಲಾ ಹಂತಗಳಲ್ಲಿ, ಮೂರು ಸ್ತರದ ಸ್ಥಳೀಯ ಸರಕಾರದ ಸಂರಚನೆಯನ್ನು ಬಲವಂತ್‌ರಾಯ್ ಮೆಹ್ತ ಸಮಿತಿಯು ಶಿಫಾರಸ್ಸು ಮಾಡಿದೆ. ಹಾಗಾಗಿ, ಜಿಲ್ಲಾಡಳಿತದಲ್ಲಿ ಪಂಚಾಯಿತಿ ರಾಜ್ ಸೇರ್ಪಡೆಯು ಒಂದು ಆಮೂಲಾಗ್ರ ಬದಲಾವಣೆಯಾಗಿದೆ. ಬೇರೆ ಬೇರೆ ರಾಜ್ಯಗಳು ವಿಭಿನ್ನ ವಿಧಾನಗಳನ್ನು ಅಂಗೀಕರಿಸಿವೆ. ಮಹಾರಾಷ್ಟ್ರ ಮತ್ತು ಗುಜರಾತ್‌ಗಳಂತಹ ರಾಜ್ಯಗಳಲ್ಲಿ ಜಿಲ್ಲಾ ಹಂತದ ಸಂಸ್ಥೆಗಳಾದ ಜಿಲ್ಲಾ ಪರಿಷತ್‌ಗಳನ್ನು ಸದೃಢಗೊಳಿಸಲಾಯಿತು. ಆಂಧ್ರ ಪ್ರದೇಶ ಮತ್ತು ರಾಜಾಸ್ಥಾನಗಳಂತಹ ಕಡೆಗಳಲ್ಲಿ ಅದನ್ನು ಮೇಲ್ವಿಚಾರಣಾ ಮತ್ತು ಸಮನ್ವಯ ನಿಕಾಯವಾಗಿ ನಿಯೋಜಿಸಲಾಯಿತು.

## 16.5 ಪ್ರಾದೇಶಿಕ ಉಪ–ವಿಭಾಗಗಳು

ರಾಜ್ಯದಿಂದ ರಾಜ್ಯಕ್ಕೆ ಹಾಗೂ ರಾಜ್ಯದಲ್ಲಿನ ಜಿಲ್ಲೆಯಿಂದ ಜಿಲ್ಲೆಗೆ; ಜಿಲ್ಲೆಯ ಒಟ್ಟಳತೆ ಮತ್ತು ಜನಸಂಖ್ಯೆಯಲ್ಲಿ ಹೆಚ್ಚಿನ ಭಿನ್ನತೆಗಳನ್ನು ಕಾಣಬಹುದಾಗಿದೆ. ದತ್ತಾಂಶದ ಆಧಾರದಲ್ಲಿ (ಭಾರತದ ಜನಗಣತಿ, 2001) ಪಶ್ಚಿಮಬಂಗಾಳವು ಜನಸಂಖ್ಯೆಯ ನಿಟ್ಟಿನಲ್ಲಿ ಅತಿ ಹೆಚ್ಚು ಸರಾಸರಿ (4.46

ದಶಲಕ್ಷ) ಪ್ರಮಾಣದ ಜಿಲ್ಲೆಗಳನ್ನು ಹೊಂದಿದೆ. ನಂತರದಲ್ಲಿನ ರಾಜ್ಯವೆಂದರೆ ಆಂಧ್ರಪ್ರದೇಶ (3.29 ದಶಲಕ್ಷ). ಆದಾಗ್ಯೂ, ಅರುಣಾಚಲ ಪ್ರದೇಶವು ಕನಿಷ್ಟ ಸರಾಸರಿ ಪ್ರಮಾಣದ (84,000) ಜಿಲ್ಲೆಯನ್ನು ಹೊಂದಿದ್ದು; ನಂತರದಲ್ಲಿನ ರಾಜ್ಯವೆಂದರೆ, ಮಿಜೋರಾಂ (1,11,000). ಜಿಲ್ಲಾವಾರು ಸರಾಸರಿ ಪ್ರಮಾಣದಲ್ಲಿನ ಅತ್ಯಧಿಕ ಹೆಚ್ಚಳವು ಪಶ್ಚಿಮ ಬಂಗಾಳದಲ್ಲಿ ಕಂಡುಬಂದಿದೆ. ಇಲ್ಲಿ 1991ರಿಂದ 2001ರ ಅವಧಿಯಲ್ಲಿ 452 ಸಾವಿರ ಜನಗಳ ಸೇರ್ಪಡೆಯಾಗಿದೆ. ಇದರ ನಂತರದಲ್ಲಿನ ರಾಜ್ಯವೆಂದರೆ, ಆಂಧ್ರಪ್ರದೇಶ (401 ಸಾವಿರ). ಜಿಲ್ಲಾವಾರು ಸರಾಸರಿ ಪ್ರಮಾಣದಲ್ಲಿನ ಗಮನಾರ್ಹ ಇಳಿಕೆಯು (ಸುಮಾರು ಶೇ. 50) ಒರಿಸ್ಸಾ ಮತ್ತು ಛತ್ತೀಸ್‌ಗಡ್‌ಗಳಲ್ಲಿ ಕಂಡುಬಂದಿದೆ.

ಅಗತ್ಯಗಳು ಮತ್ತು ಅವಶ್ಯಕತೆಗಳಿಗನುಗುಣವಾಗಿ ವಿವಿಧ ರಾಜ್ಯಗಳು ಪ್ರತಿಯೊಂದು ಜಿಲ್ಲೆಯಲ್ಲೂ ವಿಭಿನ್ನ ರೀತಿಯ ಆಡಳಿತಾತ್ಮಕ ವ್ಯವಸ್ಥೆಯನ್ನು ವಿಕಸಿತಗೊಳಿಸಿವೆ. ಜಿಲ್ಲೆಯೊಂದರಲ್ಲಿ ವಿಶಿಷ್ಟ ಕಾರ್ಯಗಳನ್ನು ಒಳಗೊಂಡಿರುವ ವಿವಿಧ ಸ್ತರಗಳನ್ನು ನಾವು ಕಾಣುತ್ತೇವೆ. ಮೊದಲನೇ ಹಂತ ಜಿಲ್ಲೆಯೇ ಆಗಿದೆ. ಕಲೆಕ್ಟರ್, ಪೊಲೀಸ್ ಸೂಪರಿಂಟೆಂಡೆಂಟ್ ಮತ್ತಿತರ ಜಿಲ್ಲಾ ಹಂತದ ಅಧಿಕಾರಿಗಳು ಸಮಸ್ತ ಜಿಲ್ಲೆಗೆ ತಮ್ಮ ಸೇವೆಯನ್ನು ವಿಸ್ತರಿಸುತ್ತಾರೆ. ಆಡಳಿತಾತ್ಮಕ ಅನುಕೂಲಕ್ಕಾಗಿ ಜಿಲ್ಲೆಯನ್ನು ತಾಲ್ಲೂಕುಗಳೆಂಬ ಅನೇಕ ಉಪ ವಿಭಾಗಗಳಾಗಿ ವಿಭಜಿಸಲಾಗಿದೆ. ತಾಲ್ಲೂಕುಗಳ ಒಟ್ಟಳತೆ ಮತ್ತು ಜನಸಂಖ್ಯೆಗಳೂ ಭಿನ್ನವಾಗಿರುತ್ತದೆ. ತ್ವರಿತ ಆಡಳಿತವನ್ನು ಸಾಧ್ಯವಾಗಿಸುವ ನಿಟ್ಟಿನಲ್ಲಿ; ತಾಲ್ಲೂಕು ಮತ್ತು ಜಿಲ್ಲಾ ಪ್ರಧಾನ ಕಾರ್ಯಾಲಯದ ನಡುವಿನ ಅಂತರವು ಅತ್ಯಂತ ದೀರ್ಘವಾಗಿರುವುದರಿಂದ, ಮತ್ತೊಂದು ಮಧ್ಯಂತರ ಹಂತವನ್ನು ಅಂದರೆ, ವಿಭಾಗವನ್ನು ಸ್ಥಾಪಿಸಲಾಯಿತು. ಪ್ರತಿಯೊಂದು ವಿಭಾಗವೂ ತಹಸೀಲ್ದಾರರು, ಉಪ ವಿಭಾಗಾಧಿಕಾರಿಗಳು ಅಥವಾ ಕಂದಾಯ ವಿಭಾಗಾಧಿಕಾರಿಗಳ ಮುಂದಾಳತ್ವವನ್ನು ಹೊಂದಿರುವ ಕೆಲವು ತಾಲ್ಲೂಕುಗಳನ್ನು ಒಳಗೊಂಡಿರುತ್ತದೆ. ರಾಜ್ಯದ ಪ್ರತಿಯೊಂದು ಇಲಾಖೆಯು ಸಾಮಾನ್ಯವಾಗಿ ಉಪ–ವಿಭಾಗದ ಹಂತದಲ್ಲಿ ತನ್ನ ಅಧಿಕಾರಿಗಳನ್ನು ನೇಮಿಸುತ್ತದೆ. ವಿಭಾಗೀಯ ಹಂತದ ಆಡಳಿತವು ಹೆಚ್ಚಾಗಿ ತಾಲ್ಲೂಕು ಹಂತದ ಆಡಳಿತದ ಮೇಲ್ವಿಚಾರಣಾ ಕಾರ್ಯಕ್ಕೆ ಸಂಬಂಧಿಸಿರುತ್ತದೆ. ವಿಭಾಗ ಎನ್ನುವುದು ಬ್ರಿಟಿಷರ ಕೊಡುಗೆಯಾಗಿದೆ. ವಿಭಾಗಗಳು ತಮ್ಮ ಉಪಯುಕ್ತತೆಯನ್ನು ಕಳೆದುಕೊಂಡಿರುವುದರಿಂದ ಅವುಗಳನ್ನು ರದ್ದುಗೊಳಿಸಬೇಕೆಂದು ತಮಿಳುನಾಡು ಸರ್ಕಾರವು ನೇಮಿಸಿದ ಟಿ.ಎ.ವರ್ಗೀಸ್ ಆಯೋಗವು ಶಿಫಾರಸ್ಸು ಮಾಡಿದೆ.

ಅತ್ಯಂತ ಕೆಳಸ್ತರದಲ್ಲಿ ಆಡಳಿತದ ಮೂಲಭೂತ ಘಟಕವಾದ ಗ್ರಾಮವನ್ನು ನಾವು ಹೊಂದಿದ್ದೇವೆ. ತನ್ನದೇ ಆದ ಅಧಿಕಾರ ವ್ಯಾಪ್ತಿ ಮತ್ತು ಕಾರ್ಯಗಳ ಒಂದು ಸಮುಚ್ಚಯವನ್ನು ಹೊಂದಿರುವ ಕಂದಾಯ ಗ್ರಾಮ, ಅಭಿವೃದ್ಧಿಯ ನಿಟ್ಟಿನ ಗ್ರಾಮ ಮುಂತಾದ ಗ್ರಾಮದ ವಿವಿಧ ಪರಿಕಲ್ಪನೆಗಳಿವೆ. ಬಲವಂತ್‌ರಾಯ್ ಮೆಹ್ತ ಸಮಿತಿಯ ಶಿಫಾರಸ್ಸುಗಳನ್ನು ಆಧರಿಸಿ ಪಂಚಾಯಿತಿ ರಾಜ್ ಸ್ಥಾಪನೆಯೊಂದಿಗೆ ಮೂರು ಸ್ತರದ ಸಂರಚನೆಯೊಂದನ್ನು ದೇಶದಲ್ಲಿ ಪ್ರಾರಂಭಿಸಲಾಯ್ತು. ವಿನ್ಯಾಸವು ಸ್ಥೂಲವಾಗಿ ಗ್ರಾಮ, ಬ್ಲಾಕ್ ಮತ್ತು ಜಿಲ್ಲೆಗಳನ್ನು ಒಳಗೊಂಡಿತ್ತು. ಜಿಲ್ಲಾ ಹಂತದಲ್ಲಿ ಜಿಲ್ಲಾ ಪರಿಷತ್, ಬ್ಲಾಕ್ ಹಂತದಲ್ಲಿ ಪಂಚಾಯತ್ ಸಮಿತಿ ಮತ್ತು ಗ್ರಾಮದ ಹಂತದಲ್ಲಿ ಗ್ರಾಮ ಪಂಚಾಯತ್‌ಗಳು ಅಭಿವೃದ್ಧಿಯ ನಿಟ್ಟಿನ ಕಾರ್ಯಕ್ರಮಗಳ ಆಡಳಿತ ನಡೆಸುವಂತಹ ಪ್ರಜಾಸತ್ತಾತ್ಮಕ ಸಂಸ್ಥೆಗಳಾಗಿದೆ.

## 16.6 ಕಲೆಕ್ಟರ್ ಮತ್ತು ಜಿಲ್ಲಾಡಳಿತ

ಹರಿಯಾಣ ಮತ್ತು ಪಂಜಾಬ್‌ಗಳಂತಹ ರಾಜ್ಯಗಳಲ್ಲಿ ಡೆಪ್ಯುಟಿ ಕಮಿಷನರ್ ಎಂದು ಕರೆಯಲ್ಪಡುವ ಜಿಲ್ಲಾ ಕಲೆಕ್ಟರ್‌ರವರು ಜಿಲ್ಲೆಯ ಆಡಳಿತದ ಮುಖ್ಯಸ್ಥರಾಗಿರುತ್ತಾರೆ. ಈ ಹುದ್ದೆ ರಚನೆಯಾದ 1772ರಿಂದಲೂ ಜಿಲ್ಲಾ ಕಲೆಕ್ಟರ್‌ರವರು ಜಿಲ್ಲಾಡಳಿತದ ಆಡಳಿತಾತ್ಮಕ ಮುಖ್ಯಸ್ಥರಾಗಿ ಮುಂದುವರಿಯುತ್ತಿದ್ದಾರೆ. ದೇಶದ ಉದ್ದಗಲಕ್ಕೂ ತನ್ನ ಆಧಿಪತ್ಯವನ್ನು ಸ್ಥಾಪಿಸುವ ಸಲುವಾಗಿ ಅಂದಿನ ಬ್ರಿಟೀಷ್ ಸರ್ಕಾರದ ಪ್ರತಿನಿಧಿಯಾಗಿ (ಏಜೆಂಟ್) ನಿಯೋಜಿಸಲ್ಪಟ್ಟಿದ್ದರೂ, ಅವರು ಅಭಿವೃದ್ಧಿ ಮತ್ತು ನಿಯಂತ್ರಕ ಕ್ಷೇತ್ರಗಳೆರಡರಲ್ಲೂ ಮಹತ್ವಪೂರ್ಣ ಪಾತ್ರವನ್ನು ನಿರ್ವಹಿಸುತ್ತಾರೆ. ಪ್ರಮುಖವಾಗಿ; ಕಂದಾಯ, ನ್ಯಾಯ ಪಾಲನೆ ಮತ್ತು ವಿಕಾಸಾತ್ಮಕವೆಂಬ ಮೂರು ಪ್ರಧಾನ ಕಾರ್ಯಗಳನ್ನು ಅವರು ಹೊಂದಿದ್ದು, ಈ ಪ್ರಧಾನ ಕಾರ್ಯಗಳನ್ನು ಹೊರತುಪಡಿಸಿ, ರಾಜ್ಯ ಮತ್ತು ಕೇಂದ್ರ ಸರಕಾರಗಳು ಅತ್ಯಧಿಕ ಸಂಖ್ಯೆಯ ಇತರ ಕಾರ್ಯಗಳನ್ನು ಸಹ ಅವರಿಗೆ ವಹಿಸಿದೆ.

ಕಲೆಕ್ಟರ್‌ರವರು ಕಂದಾಯ ಆಡಳಿತದ ಮುಖ್ಯಸ್ಥರಾಗಿದ್ದಾರೆ. ಪೊಲೀಸ್, ಅಭಿವೃದ್ಧಿ ಹಾಗೂ ಜನರ ಕ್ಷೇಮಾಭ್ಯುದಯಕ್ಕೆ ಸಂಬಂಧಿಸಿದ ಆಡಳಿತ ಸ್ವರೂಪದಲ್ಲಿ ಸಾಕಷ್ಟು ಬದಲಾವಣೆಯಿದ್ದರೂ, ಕಂದಾಯ ಕಾರ್ಯಗಳು ಹೆಚ್ಚಿನ ಸಮಯ ಮತ್ತು ಗಮನವನ್ನು ತೆಗೆದುಕೊಳ್ಳುತ್ತವೆ. ಕಲೆಕ್ಟರ್‌ರವರು ಜಿಲ್ಲೆಯಲ್ಲಿನ ಕಾನೂನು ಮತ್ತು ಸುವ್ಯವಸ್ಥಿತ ಆಡಳಿತದ ಉಸ್ತುವಾರಿಯನ್ನು ಹೊಂದಿರುತ್ತಾರೆ. ಪೊಲೀಸ್ ಆಡಳಿತಕ್ಕೆ ಸಂಬಂಧಿಸಿದ ನಿಯಂತ್ರಣ ಮತ್ತು ಮೇಲ್ವಿಚಾರಣೆಯ ಪಾತ್ರವನ್ನು ಅವರು ನಿರ್ವಹಿಸುತ್ತಾರೆ. ಕಾನೂನು ಮತ್ತು ಸುವ್ಯವಸ್ಥೆಯ ವಿವಿಧ ಅಂಶಗಳ ಬಗ್ಗೆ ಅವರು ಸರ್ಕಾರಕ್ಕೆ ಸಲಹೆ ಕೊಡುತ್ತಾರೆ.

ಆದಾಗ್ಯೂ, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿನ ಅವರ ಪಾತ್ರ ಮತ್ತು ಪೊಲೀಸ್ ಸೂಪರಿಂಟೆಂಡೆಂಟ್ ಅವರೊಂದಿಗಿನ ವ್ಯವಹಾರದ ಕುರಿತಾಗಿ ಅನೇಕ ವಿವಾದಗಳು ಉದ್ಭವಿಸಿದ್ದಾಗ್ಯೂ, ಕಾನೂನು ಮತ್ತು ಸುವ್ಯವಸ್ಥೆಯು ಅವರ ಪ್ರಮುಖ ಕಾರ್ಯಗಳಲ್ಲಿ ಒಂದಾಗಿದೆ.

ಸ್ವಾತಂತ್ರ್ಯದ ನಂತರ ಮತ್ತು ಯೋಜನಾ ತಂತ್ರಗಳನ್ನು ಅಳವಡಿಸಿಕೊಳ್ಳುವುದರೊಂದಿಗೆ ಕಲೆಕ್ಟರ್‌ರವರು ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಪ್ರಮುಖ ವ್ಯಕ್ತಿಯಾಗಿದ್ದಾರೆ. ಅಭಿವೃದ್ಧಿಯ ನಿಟ್ಟಿನ ಆಡಳಿತದಲ್ಲಿ ಅವರು ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಚುನಾವಣೆಗಳನ್ನು ನಡೆಸುವುದು, ವಿಪತ್ತುಗಳ ನಿರ್ವಹಣೆ, ಸ್ಥಳೀಯ ಸರ್ಕಾರಿ ಸಂಸ್ಥೆಗಳ ಮೇಲ್ವಿಚಾರಣೆಗಳಂತಹ ಇತರ ಕ್ಷೇತ್ರಗಳಲ್ಲಿ ಕಲೆಕ್ಟರ್‌ರವರು ಪ್ರಮುಖ ಪಾತ್ರವಹಿಸುತ್ತಾರೆ. ಜಿಲ್ಲಾ ಕಲೆಕ್ಟರ್ ಕುರಿತಾದ ಮುಂದಿನ ಘಟಕದಲ್ಲಿ ಜಿಲ್ಲಾಡಳಿತದಲ್ಲಿನ ಅವರ ಪಾತ್ರದ ವಿವರಗಳನ್ನು ಚರ್ಚಿಸಲಾಗುವುದು. ಜಿಲ್ಲಾಡಳಿತದಲ್ಲಿ ಅವರ ಸಹಯೋಗವಿಲ್ಲದ ಯಾವುದೇ ಕ್ಷೇತ್ರವಿಲ್ಲ ಎಂದಷ್ಟೇ ಹೇಳಬಹುದು.

## 16.7 ಜಿಲ್ಲಾಡಳಿತದ ಆಂಶಿಕ ಭಾಗಗಳು

ಜಿಲ್ಲೆಯು ಸಾರ್ವಜನಿಕ ಆಡಳಿತ ಯಂತ್ರದ ಜೊತೆ ಜನರು ನೇರ ಸಂಪರ್ಕಕ್ಕೆ ಬರುವ ಒಂದು ಪ್ರಮುಖ ಭೌಗೋಳಿಕ ಘಟಕವಾಗಿದೆ. ಜಿಲ್ಲಾಡಳಿತದ ವಿಸ್ತೃತ ವಿನ್ಯಾಸದಲ್ಲಿ ಬೃಹತ್ ಪ್ರಮಾಣದ ಏಕರೂಪತೆಯಿದ್ದರೂ ಸಹಾ ಆಡಳಿತದ ನೈಜ ವಿನ್ಯಾಸವು ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿರುತ್ತದೆ. ಸಮುದಾಯವು ಜಿಲ್ಲಾಡಳಿತದ ಸಾಮೀಪ್ಯದಲ್ಲಿರುವುದರಿಂದ ಹೆಚ್ಚಿನ ಸಂಖ್ಯೆಯ ರಾಜ್ಯ ಮಟ್ಟದ ಸಂಸ್ಥೆಗಳು ಜಿಲ್ಲೆಯಲ್ಲಿ ವಿವಿಧ ರೀತಿಯ ಕಾರ್ಯಗಳಲ್ಲಿ ತೊಡಗಿರುವುದನ್ನು ಕಾಣಬಹುದು. ಕಾನೂನು ಮತ್ತು ಸುವ್ಯವಸ್ಥೆ, ಕಂದಾಯ, ವ್ಯವಸಾಯ, ಪಶುಸಂಗೋಪನೆ, ಕ್ಷೇಮಾಭ್ಯುದಯ, ಸಾರ್ವಜನಿಕ ವಿತರಣೆ, ಚುನಾವಣೆ, ಸ್ಥಳೀಯ ಸಂಸ್ಥೆಗಳ ಆಡಳಿತ, ತುರ್ತುಪರಿಸ್ಥಿತಿ ಮತ್ತು ನೈಸರ್ಗಿಕ ವಿಪತ್ತಿಗೆ ಸಂಬಂಧಿಸಿದ ಕಾರ್ಯಗಳು ಹಾಗು ಉಳಿಕೆ ಕಾರ್ಯಗಳೆಂದು ಇವುಗಳನ್ನು ವಿಂಗಡಿಸಬಹುದು.

ಸಾರ್ವಜನಿಕ ಭದ್ರತೆ, ಕಾನೂನು ಮತ್ತು ಸುವ್ಯವಸ್ಥೆ, ಅಪರಾಧ ನಿಯಂತ್ರಣ ಮತ್ತು ನ್ಯಾಯ ಪರಿಪಾಲನೆ ಇವುಗಳು ಜಿಲ್ಲಾಡಳಿತದ ಪ್ರಮುಖ ಕಾಳಜಿಯಾಗಿವೆ. ಜಿಲ್ಲಾ ಕಲೆಕ್ಟರ್ ಮತ್ತು ಪೊಲೀಸ್ ಸೂಪರಿಂಟೆಂಡೆಂಟ್ ಇವರುಗಳು ಈ ಕಾರ್ಯಗಳನ್ನು ಕೈಗೊಳ್ಳುತ್ತಾರೆ. ಜಿಲ್ಲೆಯಲ್ಲಿ ಶಾಂತಿ ಮತ್ತು ನೆಮ್ಮದಿಯನ್ನು ಕಾಪಾಡಲು ಅವರು ಜವಾಬ್ದಾರರಾಗಿರುತ್ತಾರೆ. ಕಾರಾಗೃಹದ ಆಡಳಿತವು ಪ್ರತ್ಯೇಕ

ಇಲಾಖೆಯಾಗಿದ್ದಾಗ್ಯೂ, ಈ ವರ್ಗದಲ್ಲಿ ನಿಕಟ ಸಂಬಂಧವನ್ನು ಹೊಂದಿರುವ ಕಾರ್ಯವಾಗಿದೆ. ಜಿಲ್ಲಾ ಮ್ಯಾಜಿಸ್ಟ್ರೇಟ್ ಆಗಿರುವ ಕಲೆಕ್ಟರ್‌ರವರು ಕಾರಾಗೃಹಗಳ ಆಡಳಿತದಲ್ಲಿ ಮೇಲ್ವಿಚಾರಣಾ ಪಾತ್ರವನ್ನು ಹೊಂದಿರುತ್ತಾರೆ.

ಎರಡನೇ ಗುಂಪಿನ ಕಾರ್ಯಗಳು ಕಂದಾಯ ಆಡಳಿತಕ್ಕೆ ಸಂಬಂಧಿಸಿವೆ. ಭೂಕಂದಾಯದ ನಿಗದಿ ಮತ್ತು ಸಂಗ್ರಹಣೆ, ಸಾರ್ವಜನಿಕ ಬಾಕಿ ಹಣ ಮತ್ತು ಮಾರಾಟ ತೆರಿಗೆ ಮುಂತಾದ ತೆರಿಗೆಗಳ ಸಂಗ್ರಹ, ಭೂದಾಖಲೆಗಳ ಸಂರಕ್ಷಣೆ, ಖಾಸಗಿ ವ್ಯಕ್ತಿಗಳು ಮತ್ತು ಸರ್ಕಾರದ ನಡುವಿನ ಭೂ ತಕರಾರುಗಳ ನ್ಯಾಯ ನಿರ್ಣಯ, ಭೂ ಸುಧಾರಣೆಗಳ ಕಾರ್ಯ್ಯಾನ್ವಯನ, ವ್ಯವಸಾಯ ಹಿಡುವಳಿಗಳ ಒಟ್ಟುಗೂಡಿಸುವಿಕೆ ಮುಂತಾದವುಗಳು ಜಿಲ್ಲಾ ಹಂತದಲ್ಲಿನ ಕಂದಾಯ ಕಾರ್ಯಗಳೆನಿಸಿವೆ. ಜಿಲ್ಲಾ ಕಲೆಕ್ಟರ್‌ರವರು ಈ ಎಲ್ಲಾ ಕಾರ್ಯಗಳಿಗೂ ಮೂಲತಃ ಜವಾಬ್ದಾರರಾಗಿರುತ್ತಾರೆ ಮತ್ತು ಇವರ ಬೆಂಬಲಕ್ಕೆ ಕಂದಾಯ ಮತ್ತಿತರ ಇಲಾಖೆಯ ಅಧಿಕಾರಿಗಳ ವಿಸ್ತೃತ ಜಾಲವಿದೆ.

ಸ್ವಾತಂತ್ರಾ ನಂತರ, ಅಭಿವೃದ್ಧಿಯ ನಿಟ್ಟಿನ ಆಡಳಿತವು ಎಲ್ಲ ರೀತಿಯಿಂದಲೂ ವ್ಯಾಪಕವಾಗಿದೆ ಮತ್ತು ಸರ್ಕಾರವು ಅಭಿವೃದ್ಧಿ ಕಾರ್ಯಗಳ ವಿಶಾಲ ಕ್ಷೇತ್ರವನ್ನು ನಿಭಾಯಿಸಲು ಪ್ರಾರಂಭಿಸಿದೆ. ಸಮಾಜವು ಗ್ರಾಮಾಂತರ ಸ್ವರೂಪವನ್ನು ಹೊಂದಿರುವುದರಿಂದ ವ್ಯವಸಾಯ ಸಂಬಂಧಿತ ಅಭಿವೃದ್ಧಿಯು ಜಿಲ್ಲಾಡಳಿತದ ಪ್ರಮುಖ ಕಾರ್ಯವಾಗಿದೆ. ಇದು ನೀರಾವರಿ, ಸಹಕಾರ, ಪಶು ಸಂಗೋಪನೆ, ಮೀನುಗಾರಿಕೆ ಮುಂತಾದವುಗಳನ್ನು ಒಳಗೊಂಡಿದೆ. ಜಿಲ್ಲಾ ಕಲೆಕ್ಟರ್‌ರವರ ಮೇಲ್ವಿಚಾರಣೆ ಮತ್ತು ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುವ ವಿಷಯ ತಜ್ಞರು ಈ ಪ್ರತಿಯೊಂದು ಕಾರ್ಯಗಳನ್ನು ನೋಡಿಕೊಳ್ಳುತ್ತಾರೆ. ಕೆಲವು ರಾಜ್ಯಗಳಲ್ಲಿ ಈ ಬಹುತೇಕ ಕಾರ್ಯಗಳನ್ನು ಪಂಚಾಯಿತಿ ರಾಜ್ ಸಂಸ್ಥೆಗಳು ಕೈಗೊಳ್ಳುತ್ತದೆ.

ಜಿಲ್ಲೆಯಲ್ಲಿ ಕ್ಷೇಮಾಭ್ಯುದಯವು, ಅಭಿವೃದ್ಧಿ ಕಾರ್ಯಗಳ ಮತ್ತೊಂದು ಘಟಕವಾಗಿದೆ. ಸಾರ್ವಜನಿಕ ಆರೋಗ್ಯ, ದುರ್ಬಲ ವರ್ಗದವರ ಮತ್ತು ಹಿಂದುಳಿದ ಗುಂಪುಗಳ ಕಲ್ಯಾಣ, ಶಿಕ್ಷಣ ಇತ್ಯಾದಿಗಳು ಈ ವಿಭಾಗದಲ್ಲಿ ಕಂಡುಬರುತ್ತವೆ. ಜಿಲ್ಲೆಯ ಹಂತದಲ್ಲಿ ಈ ಪ್ರತಿಯೊಂದು ಕಾರ್ಯವನ್ನು ಪ್ರತ್ಯೇಕ ಅಧಿಕಾರಿಗಳಿಗೆ ವಹಿಸಲಾಗುತ್ತದೆ.

ನಿರ್ದಿಷ್ಟವಾಗಿ, ಕಾಳಸಂತೆ ವ್ಯಾಪಾರ ಮತ್ತು ಅಭಾವದ ಹಿನ್ನೆಲೆಯಲ್ಲಿ ಸಾರ್ವಜನಿಕ ವಿತರಣೆಯು ಒಂದು ಪ್ರಮುಖ ಕಾರ್ಯವಾಗಿದೆ. ಇದು ಕಲೆಕ್ಟರ್‌ರವರಿಗೆ ನಿಯೋಜಿಸಲಾದ ಒಂದು ಕಾರ್ಯವಾಗಿದೆ. ಆದಾಗ್ಯೂ, ಪ್ರತ್ಯೇಕ ವ್ಯವಸ್ಥೆಯೊಂದು ಅವರ ನಿಯಂತ್ರಣದಲ್ಲಿರುತ್ತದೆ. ಆಹಾರ ಧಾನ್ಯಗಳು, ಸೀಮೆಎಣ್ಣೆ, ಸಕ್ಕರೆ ಮುಂತಾದ ದಿನಬಳಕೆಯ ವಸ್ತುಗಳು ಈ ವಿಭಾಗದಲ್ಲಿ ಕಂಡುಬರುತ್ತವೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ, ರಾಷ್ಟ್ರೀಯ, ರಾಜ್ಯ ಮತ್ತು ಸ್ಥಳೀಯ ಹಂತದ ಅನೇಕ ನಿಕಾಯಗಳಿಗೆ ನಿಯತಕಾಲಿಕವಾಗಿ ಚುನಾವಣೆಗಳನ್ನು ನಡೆಸಲಾಗುತ್ತದೆ. ಮತದಾರರ ನೋಂದಣಿಯಿಂದ ಪ್ರಾರಂಭಿಸಿ ಚುನಾವಣೆಗಳನ್ನು ನಡೆಸುವ ಮತ್ತು ಫಲಿತಾಂಶವನ್ನು ಘೋಷಿಸುವವರೆಗಿನ ಚುನಾವಣಾ ಪ್ರಕ್ರಿಯೆಯು ಜಿಲ್ಲಾ ಹಂತದಲ್ಲಿ ಜಿಲ್ಲಾ ಕಲೆಕ್ಟರ್‌ರವರ ಮೇಲ್ವಿಚಾರಣೆಯಲ್ಲಿ ಕೈಗೊಳ್ಳುವ ಪ್ರಮುಖ ಕಾರ್ಯವಾಗಿದೆ.

ಸ್ಥಳೀಯ ಆಡಳಿತವು ಜಿಲ್ಲಾಡಳಿತ ಮತ್ತು ಸ್ಥಳೀಯ ಸಮುದಾಯಗಳ ನಡುವಿನ ಅತ್ಯಗತ್ಯ ಸಂಪರ್ಕಕೊಂಡಿಯಾಗಿದೆ. ಜಿಲ್ಲಾಡಳಿತದಲ್ಲಿ ಗ್ರಾಮಾಂತರ ಮತ್ತು ನಗರ ಪ್ರದೇಶದ ಸ್ಥಳೀಯ ಸಂಸ್ಥೆಗಳು ಅತಿ ಮುಖ್ಯವಾದ ಪಾತ್ರವನ್ನು ನಿರ್ವಹಿಸುತ್ತದೆ. ರಾಜ್ಯ ಸರ್ಕಾರಗಳು ಮೇಲ್ವಿಚಾರಣೆ ಮತ್ತು ನಿಯಂತ್ರಣದ ಪಾತ್ರವನ್ನು ಜಿಲ್ಲೆಯ ಕಲೆಕ್ಟರ್‌ರವರಿಗೆ ವಹಿಸಿವೆ.

ಅಗತ್ಯವಿದ್ದಾಗ ಗಮನಹರಿಸಬೇಕಾದ ಮತ್ತೊಂದು ಪ್ರಧಾನ ಕ್ಷೇತ್ರವೆಂದರೆ, ಪ್ರಾಕೃತಿಕ ವಿಕೋಪ ಮತ್ತು ತುರ್ತುಪರಿಸ್ಥಿತಿಗಳು. ಪ್ರಾಕೃತಿಕ ವಿಕೋಪಗಳ ತುರ್ತುಪರಿಸ್ಥಿತಿಗಳನ್ನು ಎದುರಿಸುವ ಸಂದರ್ಭದಲ್ಲಿ ಇಡೀ ಆಡಳಿತವು ಸಿದ್ಧವಾಗಿರುವಂತೆ ನೋಡಿಕೊಳ್ಳಬೇಕು. ಜಿಲ್ಲೆಯ ಆಡಳಿತ ಮುಖ್ಯಾಧಿಕಾರಿಯಾಗಿ ಬಿಕ್ಕಟ್ಟನ್ನು ನಿರ್ವಹಿಸುವಲ್ಲಿ ಕಲೆಕ್ಟರ್‌ರವರು ಮಹತ್ವದ ಪಾತ್ರವನ್ನು ವಹಿಸುತ್ತಾರೆ.

ಮೇಲೆ ಪಟ್ಟಿ ಮಾಡಿರುವ ಪ್ರಮುಖ ಕಾರ್ಯಗಳಲ್ಲದೆ, ನಿರ್ದಿಷ್ಟವಾಗಿ ವಿಶದೀಕರಿಸಿದ ಹಾಗೂ ವಿವರಿಸಿಲ್ಲದ ಸರ್ಕಾರದ ಅನೇಕ ಕಾರ್ಯಗಳು/ಕ್ಷೇತ್ರಗಳು ಇರಬಹುದು. ಸಣ್ಣ ಉಳಿತಾಯಗಳು, ಸಾರ್ವಜನಿಕ ಸಾಲಗಳಿಗೆ ಕೊಡುಗೆ ಇತ್ಯಾದಿ ಉಳಿಕೆ ಕಾರ್ಯಗಳು ಜಿಲ್ಲಾಡಳಿತದಲ್ಲಿ ಅಷ್ಟೇ ಪ್ರಮುಖವಾಗಿದೆ.

ಜಿಲ್ಲಾಡಳಿತ ಪ್ರಾಥಮಿಕ ಉದ್ದೇಶವೇನೆಂದರೆ, ಜಿಲ್ಲೆಯ ವ್ಯವಸ್ಥಿತ ಮತ್ತು ಶೀಘ್ರ ಅಭಿವೃದ್ಧಿಯನ್ನು ಖಾತ್ರಿಪಡಿಸಿಕೊಳ್ಳುವುದು. ಈ ಉದ್ದೇಶವನ್ನು ಸಾಧಿಸಲು ಆಡಳಿತವು ಕಾನೂನು ಮತ್ತು ಸುವ್ಯವಸ್ಥೆ, ಭೂಕಂದಾಯ ಮತ್ತಿತರ ತೆರಿಗೆಗಳ ಸಂಗ್ರಹಣೆ, ಸಾರ್ವಜನಿಕ ವಿತರಣಾ ವ್ಯವಸ್ಥೆ, ವಿಕೋಪ ಮತ್ತು ತುರ್ತುಪರಿಸ್ಥಿತಿಗಳು ಹಾಗೂ ಆಡಳಿತಾತ್ಮಕ ನ್ಯಾಯ ಇವುಗಳನ್ನು ನಿಭಾಯಿಸುತ್ತದೆ.

## 16.8 ಆಡಳಿತಾತ್ಮಕ ವ್ಯವಸ್ಥೆ

ಜಿಲ್ಲಾ ಮಟ್ಟದಲ್ಲಿ ಕೈಗೊಳ್ಳುವ ನಾನಾ ಬಗೆಯ ಕಾರ್ಯಗಳು ಒಂದು ಸಂಕೀರ್ಣವಾದ ಆಡಳಿತಾತ್ಮಕ ವ್ಯವಸ್ಥೆಯನ್ನು ಉಂಟುಮಾಡುತ್ತವೆ. ಜಿಲ್ಲಾ ಕಲೆಕ್ಟರ್‌ರವರ ಕಛೇರಿಯಲ್ಲದೆ ವ್ಯವಸಾಯ, ಪಶುಸಂಗೋಪನೆ, ನೀರಾವರಿ, ಸಹಕಾರ, ಸಮಾಜ ಕಲ್ಯಾಣ, ಶಿಕ್ಷಣ, ನಾಗರಿಕ ಪೂರೈಕೆಗಳು, ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ, ಕೈಗಾರಿಕೆಗಳು ಇತ್ಯಾದಿ ಅನೇಕ ಇಲಾಖೆಗಳನ್ನು ಜಿಲ್ಲೆಯು ಹೊಂದಿದೆ. ಈ ಎಲ್ಲಾ ಇಲಾಖೆಗಳನ್ನು ಒಳಗೊಂಡಂತೆ ಜಿಲ್ಲಾಡಳಿತವನ್ನು ನಿಯೋಜಿಸಲಾಗಿದೆ. ರಾಜ್ಯ ಮಟ್ಟದ ಪ್ರತಿಯೊಂದು ಇಲಾಖೆಯು ಜಿಲ್ಲಾ ಹಂತದಲ್ಲಿ ಸಂಬಂಧಪಟ್ಟ ಕಾರ್ಯನಿರ್ವಾಹಕ ಇಲಾಖೆಯನ್ನು ಹೊಂದಿದೆ.

ಜಿಲ್ಲೆಗಳಲ್ಲಿನ ವಿವಿಧ ಇಲಾಖೆಗಳು ಪತ್ಯೇಕವಾದ ಸಂರಚನೆಯನ್ನು ಹೊಂದಿವೆ. ಜಿಲ್ಲಾ ಹಂತದಲ್ಲಿ ಕಲೆಕ್ಟರ್‌ಗಳು, ಉಪ–ವಿಭಾಗಗದಲ್ಲಿ ಡೆಪ್ಯುಟಿ ಕಲೆಕ್ಟರ್, ತಾಲ್ಲೂಕಿನಲ್ಲಿ ತಹಸೀಲ್ದಾರರು, ಸರ್ಕಲ್ ಹಂತದಲ್ಲಿ ಕಂದಾಯ ನಿರೀಕ್ಷಕರು, ಗ್ರಾಮ ಹಂತದಲ್ಲಿ ಪಟ್‌ವಾರಿಗಳಂತಹ ಗ್ರಾಮೀಣ ಅಧಿಕಾರಿಗಳು ಹೀಗೆ ಕಂದಾಯ ಇಲಾಖೆಯು ವಿವಿಧ ಅಧಿಕಾರಿಗಳನ್ನು ಒಳಗೊಂಡಿದೆ. ಪೊಲೀಸ್ ಸೂಪರಿಂಟೆಂಡೆಂಟ್, ಡೆಪ್ಯುಟಿ ಪೊಲೀಸ್ ಸೂಪರಿಂಟೆಂಡೆಂಟ್, ಪೊಲೀಸ್ ನಿರೀಕ್ಷಕರು, ಪೊಲೀಸ್ ಉಪ–ನಿರೀಕ್ಷಕರು ಮತ್ತು ಕಾನ್‌ಸ್ಟೇಬಲ್ – ಇವರುಗಳು ಕ್ಷೇತ್ರದ ಕಾರ್ಯನಿರ್ವಾಹಕರುಗಳಾಗಿ ವಿವಿಧ ಹಂತಗಳಲ್ಲಿ ಕಾರ್ಯನಿರ್ವಹಿಸುತ್ತಾರೆ. ಹಾಗೆಯೇ, ಆರೋಗ್ಯ, ಶಿಕ್ಷಣ, ವ್ಯವಸಾಯ, ಸಹಕಾರ ಇತ್ಯಾದಿ ಇಲಾಖೆಗಳಲ್ಲಿ ಇಲಾಖಾ ಅಧಿಕಾರಿಗಳಿರುತ್ತಾರೆ. ಅನೇಕ ಸಂದರ್ಭಗಳಲ್ಲಿ, ಅವರ ಅಧಿಕಾರ ವ್ಯಾಪ್ತಿಯು ಜಿಲ್ಲೆಯೊಂದಿಗೆ ಸಮವ್ಯಾಪಿಯಾಗಿರುತ್ತದೆ. ಆದರೆ ಉತ್ತರೋತ್ತರವಾಗಿ ಪ್ರತಿಯೊಂದು ಜಿಲ್ಲೆಗೂ  ಒಂದಕ್ಕಿಂತ ಹೆಚ್ಚು ಜಿಲ್ಲಾ ಹಂತದ ಅಧಿಕಾರಿಯಿರುತ್ತಾರೆ. ಪಂಚಾಯಿತಿ ರಾಜ್ ಸಂಸ್ಥೆಗಳಲ್ಲಿ

ಉದ್ಯೋಗಸ್ಥರ ಶ್ರೇಣಿಯಿದ್ದು, ಅವರಲ್ಲಿನ ಕೆಲವರು ಬ್ಲಾಕ್ ಮತ್ತು ಗ್ರಾಮದ ಹಂತದಲ್ಲಿರುವ ಅಭಿವೃದ್ಧಿ ಇಲಾಖೆಗಳ ಜೊತೆ ಏಕೀಕೃತಗೊಂಡಿರುತ್ತಾರೆ.

ಅದೇ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವಾಗ ಪ್ರತಿಯೊಂದು ಇಲಾಖೆಯೂ ರಾಜ್ಯದ ಪ್ರತಿರೂಪದಂತೆ ವಿಶಿಷ್ಟವಾದ ತನ್ನದೇ ಅಸ್ಮಿತೆಯನ್ನು ಕಾಪಾಡಿಕೊಂಡು ಬರುತ್ತದೆ. ಕಾರ್ಯಭಾರದಲ್ಲಿ ವಿಭೇದನವಿದ್ದು (differentiation), ವಿಶಿಷ್ಟ ಅಸ್ಮಿತೆಯನ್ನು ಪಾಲಿಸಿದಾಗ್ಯೂ ಇಲಾಖೆಗಳ ನಡುವೆ ಸ್ವಲ್ಪ ಪ್ರಮಾಣದ ಕಾರ್ಯಭಾರದ ಹಂಚಿಕೆಯಿರುತ್ತದೆ.

## 16.9 ಕ್ಷೇತ್ರಾಡಳಿತದಲ್ಲಿನ ಸಮಸ್ಯಾತ್ಮಕ ಪ್ರದೇಶಗಳು

ಕೆಲವು ಪುನರ್ವ್ಯವಸ್ಥೆಗಳು ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯಗಳ ಸೇರ್ಪಡೆಯನ್ನು ಹೊರತುಪಡಿಸಿ, ಕ್ಷೇತ್ರಾಡಳಿತದ ವಿಶಾಲ ಚೌಕಟ್ಟು ಹೆಚ್ಚು ಕಡಿಮೆ ಹಾಗೆಯೇ ಉಳಿದಿದೆ. ಇದರಿಂದ ಆಡಳಿತಕ್ಕೆ ಹಾಗೂ ಸಮುದಾಯಕ್ಕೆ ಅನೇಕ ಸಮಸ್ಯೆಗಳು ಉಂಟಾಗಿವೆ.

ಮೊದಲನೆಯದಾಗಿ, ವಿಸ್ತೀರ್ಣ ಮತ್ತು ಜನಸಂಖ್ಯೆಗೆ ಸಂಬಂಧಿಸಿದಂತೆ ಜಿಲ್ಲೆಗಳಲ್ಲಿ ದೊಡ್ಡ ಪ್ರಮಾಣದ ವ್ಯತ್ಯಾಸಗಳಿವೆ. ಸ್ವಾತಂತ್ರ್ಯಾನಂತರದಲ್ಲಿನ ಪುನರ್ವ್ಯವಸ್ಥೆಯು, ಆಡಳಿತಾತ್ಮಕ ಅಗತ್ಯಗಳು ಮತ್ತು ದಕ್ಷತೆಗಿಂತ ಹೆಚ್ಚಾಗಿ ಬಹುಮಟ್ಟಿಗೆ, ರಾಜಕೀಯ ಪರಿಗಣನೆಗಳನ್ನು ಆಧರಿಸಿದೆ. ಈ ಭಿನ್ನತೆಗಳು ಆಡಳಿತಕ್ಕೆ ಗಂಭೀರತಮ ತೊಂದರೆಗಳನ್ನು ತಂದೊಡ್ಡುತ್ತವೆ. ಇದು ಪ್ರಧಾನವಾಗಿ, ಜನಗಳಿಗೆ ಜಿಲ್ಲಾಡಳಿತದ ಗಮ್ಯತೆಯ (access) ನಿಟ್ಟಿನಲ್ಲಿದೆ.

ಕಾರ್ಯಗಳ ಸಂಖ್ಯೆ ಮತ್ತು ಅಭಿವೃದ್ಧಿ ಇಲಾಖೆಗಳ ಪಾತ್ರದ ಹೆಚ್ಚಳದಿಂದಾಗಿ ಕಂದಾಯ ಅಧಿಕಾರಿಗಳ ಪ್ರಾಮುಖ್ಯತೆಯಲ್ಲಿ ಸಾಕಷ್ಟು ಇಳಿಕೆ ಉಂಟಾಗುತ್ತಿದೆ. ಭೂ ದಾಖಲೆಗಳ ಮೇಲಿನ ಪ್ರಬಲ ಹಿಡಿತ ಮತ್ತು ಸ್ಥಳೀಯ ಗುಂಪುಗಳ ಅಧಿಕಾರದ ಜೊತೆಗಿನ ಅವರುಗಳ ಸಂಬಂಧವು ನೆಮ್ಮದಿಗೆಡಿಸುವಂತಹ ಅಂಶವಾಗಿ ಪರಿಣಮಿಸಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಬದ್ಧತೆಯಿದ್ದಾಗ್ಯೂ, ದೇಶದಲ್ಲಿ ಭೂಸುಧಾರಣೆಗಳನ್ನು ಕಾರ್ಯಗತಗೊಳಿಸುವಲ್ಲಿ ಅನೇಕ ತೊಂದರೆಗಳು ಕಂಡುಬರುತ್ತವೆ. ಇದು ಸಮಸ್ಯೆಯ ಮತ್ತೊಂದು ಕ್ಷೇತ್ರವಾಗಿದೆ.

ಗ್ರಾಮಾಂತರ ಮತ್ತು ನಗರ ಸ್ಥಳೀಯ ಸಂಸ್ಥೆಗಳು ಕ್ಷೇತ್ರಾಡಳಿತದ ಪ್ರಮುಖ ಭಾಗವಾಗಿವೆ. ನಾಗರಿಕರ ಮತ್ತು ಅಭಿವೃದ್ಧಿ ಸಂಬಂಧಿತ ಕ್ಷೇತ್ರಗಳೆರಡರಲ್ಲೂ ಈ ಸ್ಥಳೀಯ ಸಂಸ್ಥೆಗಳು ಗಮನಾರ್ಹ ಪಾತ್ರವಹಿಸಲಿವೆ. ಹೆಚ್ಚಾಗಿ, ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯಗಳನ್ನು ಪಂಚಾಯತಿ ರಾಜ್ ಸಂಸ್ಥೆಗಳಿಗೆ ಒಪ್ಪಿಸುವಂತಹ ಪ್ರವೃತ್ತಿ ಕಂಡುಬರುತ್ತಿದೆ. ಪಕ್ಷಪಾತ ಮತ್ತು ಸ್ವಜನ ಹಿತಾಸಕ್ತಿಗೆಳೆಸುವ ಚುನಾಯಿತ ಕಾರ್ಯಕರ್ತರ ಏಕಪಕ್ಷೀಯ ಧೋರಣೆ ಬಗ್ಗೆ ಅನೇಕ ದೂರುಗಳಿವೆ. ಇದರ ಪರಿಣಾಮವಾಗಿ ರಾಜಕೀಯ ಅಸಾಮರಸ್ಯ, ತೀವ್ರಗೊಳ್ಳುತ್ತಿರುವ ಗುಂಪುಗಾರಿಕೆ, ಅಪರಾಧ ಪ್ರಮಾಣದಲ್ಲಿನ ಏರಿಕೆಯನ್ನು ಕಾಣಬಹುದಾಗಿದೆ.

ಅದೇ ರೀತಿಯಾಗಿ, ಪೌರಾಡಳಿತದ ಸ್ಥಳೀಯ ಸಂಸ್ಥೆಗಳೂ ಅನೇಕ ಸಮಸ್ಯೆಗಳನ್ನು ಎದುರಿಸುತ್ತವೆ. ಪೌರಾಡಳಿತ ಸಂಸ್ಥೆಗಳಿಗೆ ಮಾತ್ರವಲ್ಲದೆ ಜಿಲ್ಲಾಡಳಿತಕ್ಕೂ ಕುಗ್ಗುತ್ತಿರುವ ಸಂಪನ್ಮೂಲದ ನೆಲೆ, ಅಸಮರ್ಪಕ ತಾಂತ್ರಿಕ ಸಾಮರ್ಥ್ಯ, ವೃದ್ಧಿಸುತ್ತಿರುವ ಜನಸಂಖ್ಯೆಯ ಜೊತೆಗೆ, ಹೆಚ್ಚಿನ ಮತ್ತು ಉತ್ತಮ ಸೇವೆಗಳಿಗಾಗಿ ಸಮುದಾಯದ ಉನ್ನತ ನಿರೀಕ್ಷೆಗಳ ನಿಟ್ಟಿನ ಹೆಚ್ಚುತ್ತಿರುವ ಒತ್ತಡವು ಅನೇಕ ಸಮಸ್ಯೆಗಳನ್ನು ಸೃಷ್ಟಿಸುತ್ತಿದೆ.

ನಿಯಮ ನಿಬಂಧನೆಗಳಿಗೆ ಅಧಿಕಾರಶಾಹಿಯು ನೀಡುವ ಮಹತ್ವವು ಅದರ ಸುವಿಖ್ಯಾತ ಲಕ್ಷಣಗಳಲ್ಲೊಂದೆನಿಸಿದೆ. ದಶಕಗಳಿಂದ ಹೆಚ್ಚುತ್ತಿರುವ ಕೆಲಸದ ಹೊರೆಯು; ವಿಳಂಬ, ಕೆಂಪುಪಟ್ಟಿ ಪದ್ಧತಿ ಹಾಗೂ ಅಂತಿಮವಾಗಿ ಭ್ರಷ್ಟಾಚಾರಕ್ಕೆ ಕರೆದೊಯ್ಯುತ್ತದೆ. ಯಥಾಸ್ಥಿತಿ ಧೋರಣೆ ಹೊಂದಿರುವ ನೌಕಶಾಹಿಯು ಕೆಲವು ಸಂದರ್ಭದಲ್ಲಿ ಅಭಿವೃದ್ಧಿಪರ ಬೇಡಿಕೆಗಳಿಗೆ ಅಸಂವೇದನಶೀಲರಾಗಿ ಪರಿಣಮಿಸಿ ಆಡಳಿತವು ಕ್ಷೀಣಿಸಲು ಕಾರಣರಾಗುತ್ತಾರೆ.

ಅನೇಕ ವರ್ಷಗಳಿಂದ ಜಾರಿಗೆ ತರಲಾಗುತ್ತಿರುವ ಸುಧಾರಣೆಗಳು; ಹದಗೆಡುತ್ತಿರುವ ಕಾನೂನು ಮತ್ತು ಸುವ್ಯವಸ್ಥೆ ಹಾಗೂ ದೇಶದಲ್ಲಿನ ಕ್ಷೇತ್ರಾಡಳಿತದ ಏಜೆನ್ಸಿಗಳ ನಡುವಣ ಸಮನ್ವಯದಂತಹ ಪ್ರಮುಖ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗುತ್ತಿಲ್ಲ. ಸಂರಚನೆಯಲ್ಲಿನ ಪುನರ್ವ್ಯವಸ್ಥೆಯು ಸ್ವತಃ ಜಿಲ್ಲಾಡಳಿತದ ದಕ್ಷತೆಯನ್ನು ಸುಧಾರಿಸುವಲ್ಲಿ ಸಹಾಯಕವಾಗದಿರಬಹುದು. ಬಹುಶಃ ಸಹಾಯಕವಾಗುವುದೂ ಇಲ್ಲ. ನೌಕರಶಾಹಿಯ ಧೋರಣೆಯಲ್ಲಿ ಬದಲಾವಣೆಯ ಅಗತ್ಯವಿದೆ. ದುರದೃಷ್ಟವಶಾತ್, ಸುಧಾರಣಾ ಸಮಿತಿಗಳು ಮತ್ತು ಆಯೋಗಗಳು ಕ್ಷೇತ್ರಾಡಳಿತದ ಈ ಪ್ರಮುಖ

ಅಂಶವನ್ನು ನಿರ್ವಹಿಸಿಲ್ಲ. ಆದ್ದರಿಂದ, ನೌಕರಶಾಹಿಯ ಸಂರಚನಾತ್ಮಕ ಹಾಗೂ ನಡವಳಿಕೆಯ ಅಂಶಗಳೆರಡನ್ನೂ ಗಮನದಲ್ಲಿಟ್ಟುಕೊಂಡು ಹಾಗೂ ಸಮುದಾಯದ ನಿರೀಕ್ಷೆಗಳನ್ನು ಆಧರಿಸಿ ಪ್ರಜಾಪ್ರಭುತ್ವ ಸಂಪ್ರದಾಯಗಳಿಗನುಗುಣವಾಗಿ ಕ್ಷೇತ್ರಾಡಳಿತದ ಸಮಗ್ರ ಪುನರ್ವ್ಯವಸ್ಥೆಯ ಅಗತ್ಯವಿದೆ.

**ನಿಮ್ಮ ಪ್ರಗತಿಯನ್ನು ಪರಿಶೀಲಿಸಿ–2**

**ಸೂಚನೆ:**

i) ನಿಮ್ಮ ಉತ್ತರವನ್ನು ಬರೆಯಲು ಕೆಳಗೆ ಒದಗಿಸಿರುವ ಜಾಗವನ್ನು ಬಳಸಿ.

ii) ಘಟಕದ ಅಂತ್ಯದಲ್ಲಿ ಒದಗಿಸಿರುವ ಉತ್ತರದ ಜೊತೆ ನಿಮ್ಮ ಉತ್ತರಗಳನ್ನು ಪರಿಶೀಲಿಸಿ.

1) ಜಿಲ್ಲಾಡಳಿತದಲ್ಲಿ ಕಲೆಕ್ಟರ್‌ರವರ ಪಾತ್ರವನ್ನು ವಿವರಿಸಿ.

––––––––––––––––––––––––––––––––––––––––––––––––––––––

––––––––––––––––––––––––––––––––––––––––––––––––––––––

––––––––––––––––––––––––––––––––––––––––––––––––––––––

––––––––––––––––––––––––––––––––––––––––––––––––––––––

2) ಜಿಲ್ಲಾಡಳಿತವನ್ನು ಹೇಗೆ ವ್ಯವಸ್ಥೆಗೊಳಿಸಲಾಗಿದೆ?

––––––––––––––––––––––––––––––––––––––––––––––––––––––

––––––––––––––––––––––––––––––––––––––––––––––––––––––

––––––––––––––––––––––––––––––––––––––––––––––––––––––

––––––––––––––––––––––––––––––––––––––––––––––––––––––

3) ಜಿಲ್ಲಾಡಳಿತದ ಸಮಸ್ಯಾ ಕ್ಷೇತ್ರಗಳನ್ನು ಚರ್ಚಿಸಿ:

––––––––––––––––––––––––––––––––––––––––––––––––––––––

––––––––––––––––––––––––––––––––––––––––––––––––––––––

––––––––––––––––––––––––––––––––––––––––––––––––––––––

––––––––––––––––––––––––––––––––––––––––––––––––––––––

## 16.10 ಸಾರಾಂಶವನ್ನು ತಿಳಿಯೋಣ

ಭಾರತದಲ್ಲಿನ ಕ್ಷೇತ್ರಾಡಳಿತವು ನಿರಂತರತೆ ಮತ್ತು ಬದಲಾವಣೆಯ ಚಿತ್ರಣವನ್ನು ಒದಗಿಸುತ್ತದೆ. ಪಂಚಾಯಿತಿ ರಾಜ್‌ನ ಆರಂಭ, ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೆ ತರಲು ಮಾಧ್ಯಮದ (ಏಜೆನ್ಸಿಯ) ಸ್ಥಾಪನೆ ಮತ್ತು ಜನರ ಪಾಲ್ಗೊಳ್ಳುವಿಕೆಯತ್ತ ಹೆಚ್ಚಿನ ಗಮನವನ್ನು ಕೇಂದ್ರೀಕರಿಸುವ ಪ್ರಕ್ರಿಯೆಯು ಜಿಲ್ಲಾ ಮಟ್ಟದ ಆಡಳಿತದ ಏರ್ಪಾಡಿನಲ್ಲಿ ಹೊಸ ಸಂಬಂಧಗಳು ಅಗತ್ಯವೆನಿಸುವಂತೆ ಮಾಡಿದೆ. ಇದು ಹೊಸ ರೀತಿಯ ಸಂವಹನ ಮಾರ್ಗಗಳು ಮತ್ತು ಹೊಣೆಗಾರಿಕೆಯ ವಿಧಾನಗಳಲ್ಲಿನ ಹೊಸ ಪರಿಕಲ್ಪನೆಗಳು ಸಹಾ ಅಗತ್ಯವೆನಿಸುವಂತೆ ಮಾಡಿದೆ. ಈ ಘಟಕದಲ್ಲಿ, ನಾವು ಪ್ರಾದೇಶಿಕ ಆಡಳಿತ, ವಿಭಾಗೀಯ ಆಡಳಿತ, ಜಿಲ್ಲಾಡಳಿತ, ಆಡಳಿತಾತ್ಮಕ ವ್ಯವಸ್ಥೆ ಮತ್ತು ಕ್ಷೇತ್ರಾಡಳಿತದಲ್ಲಿನ ಪ್ರಮುಖ ಸಮಸ್ಯೆಗಳನ್ನು ವಿವರಿಸಿದ್ದೇವೆ. ಅಲ್ಲದೆ, ವಿಭಾಗೀಯ ಕಮಿಷನರ್ ಮತ್ತು ಜಿಲ್ಲಾ ಕಲೆಕ್ಟರ್‌ಗಳ ಪಾತ್ರವನ್ನು ಎತ್ತಿ ತೋರಿಸಲಾಗಿದೆ. ಮುಂದಿನ ಘಟಕದಲ್ಲಿ ಜಿಲ್ಲಾ ಕಲೆಕ್ಟರ್‌ರವರ ಪಾತ್ರದ ಸುದೀರ್ಘ ವಿವರಗಳನ್ನು ಒದಗಿಸಲಾಗುವುದು.

## 16.11 ಪ್ರಮುಖ ಪದಗಳು

**ಆಡಳಿತಾತ್ಮಕ ಶ್ರೇಣಿಯ ಸಮಗ್ರ ವ್ಯವಸ್ಥೆ:** ಕಾರ್ಯನಿರ್ವಾಹಕ ಎಂಜಿನಿಯರ್ ಮತ್ತು ಪೊಲೀಸ್ ಸೂಪರಿಂಟೆಂಡೆಂಟ್‌ಗಳಂತಹ ವಿವಿಧ ಇಲಾಖಾ ಮುಖ್ಯಸ್ಥರು ತಮ್ಮ ಸಾರ್ವಜನಿಕ ಸೇವಾ ಇಲಾಖೆಗಳ ಉನ್ನತ ಅಧಿಕಾರಿಗಳಿಗೆ ವರದಿ ಮಾಡುವ ವ್ಯವಸ್ಥೆ.

**ಕ್ಷೀಣಿಸುವಿಕೆ:** ಕಡಿಮೆಯಾಗುವಿಕೆ

**ಸ್ವಜನ ಪಕ್ಷಪಾತ:** ಅಧಿಕಾರವನ್ನು ಹೊಂದಿರುವವರು ಬಂಧುಮಿತ್ರರು ಅಥವಾ ಆತ್ಮೀಯ ಸ್ನೇಹಿತರಿಗೆ ತೋರುವ ಪಕ್ಷಪಾತ.

**ಪದನಾಮ:** ಹೆಸರಿಸುವ ಒಂದು ಔಪಚಾರಿಕೆ ವ್ಯವಸ್ಥೆ

**ವಿಭಿನ್ನತೆಯುಳ್ಳ ಕ್ಷೇತ್ರಾಡಳಿತದ ಚಿತ್ರಣ:** ರಾಷ್ಟ್ರಾದ್ಯಂತ ಕ್ಷೇತ್ರಾಡಳಿತದಲ್ಲಿ ಏಕರೂಪತೆಯಿಲ್ಲ. ರಾಜ್ಯದಿಂದ ರಾಜ್ಯಕ್ಕೆ, ರಾಜ್ಯದಲ್ಲಿನ ಜಿಲ್ಲೆಯಿಂದ ಜಿಲ್ಲೆಗೆ; ಜಿಲ್ಲೆಯ ಒಟ್ಟಳತೆ ಮತ್ತು ಜನಸಂಖ್ಯೆಯಲ್ಲಿ ಹೆಚ್ಚಿನ ಭಿನ್ನತೆಗಳನ್ನು ಕಾಣಬಹುದಾಗಿದೆ.

## 16.12 ಉಲ್ಲೇಖಗಳು ಮತ್ತು ಹೆಚ್ಚಿನ ಓದಿಕೆಗಳು (FURTHER READINGS)

- Administrative Reforms Commission, 1967, *Report of the Study Team on District Administration,* New Delhi.
- Administrative Reforms Commission, 1969, *Report on State Administration,* New Delhi.
- Mishra, S.N., Anil.D. Mishra and Sweta Mishra (eds.) 2003, *Public Goverance and Decentratlisation,* Mittal Publications, New Delhi.
- Maheshwari, S.R. (2001), *Indian Administration,* Orient Longman Pvt. Ltd, New Delhi.


## 16.13 ನಿಮ್ಮ ಪ್ರಗತಿಯ ನಿಟ್ಟಿನ ಅಭ್ಯಾಸಗಳನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು

**ನಿಮ್ಮ ಪ್ರಗತಿಯನ್ನು ಪರಿಶೀಲಿಸಿ–1**

1) ನಿಮ್ಮ ಉತ್ತರವು ಕೆಳಕಂಡ ಅಂಶಗಳನ್ನು ಒಳಗೊಂಡಿರತಕ್ಕದ್ದು:

- ಪ್ರಾದೇಶಿಕ ಆಡಳಿತವು, ರಾಜ್ಯ ಮಟ್ಟಕ್ಕಿಂತಲೂ ಕೆಳಸ್ತರದಲ್ಲಿ ಮತ್ತು ಜಿಲ್ಲಾ ಮಟ್ಟಕ್ಕಿಂತಲೂ ಮೇಲಿನ ಸ್ತರದಲ್ಲಿ ಕಾರ್ಯನಿರ್ವಹಿಸುವ ಸಂಸ್ಥೆಗಳ ಜಾಲವನ್ನೊಳಗೊಂಡಿದೆ.
- ಆಡಳಿತವನ್ನು ಪ್ರಾದೇಶಿಕ ಹಂತದಲ್ಲಿ 'ವಿಭಾಗಗಳೆಂಬ' ಕ್ಷೇತ್ರೀಯ ಘಟಕಗಳಾಗಿ ವಿಭಜಿಸಲಾಗಿದೆ.
- ರಾಜ್ಯದಲ್ಲಿ ಪ್ರಾದೇಶಿಕ ಆಡಳಿತದ ವಿವಿಧ ಮಾದರಿಗಳು ಕಂಡುಬರುತ್ತದೆ.

2) ನಿಮ್ಮ ಉತ್ತರವು ಕೆಳಕಂಡ ಅಂಶಗಳನ್ನು ಒಳಗೊಂಡಿರತಕ್ಕದ್ದು:

- ವಿಭಾಗದಲ್ಲಿನ ಅತ್ಯುನ್ನತ ಕಾರ್ಯನಿರ್ವಾಹಕ ಅಧಿಕಾರಿಯ ಸ್ಥಾನದಲ್ಲಿರುವ ವಿಭಾಗೀಯ ಕಮಿಷನರ್‌ರವರು ಕಾರ್ಯನೀತಿಗಳನ್ನು ಜಾರಿಗೊಳಿಸುವ ಮತ್ತು ಆಡಳಿತದ ಮೇಲ್ವಿಚಾರಣೆಯ ಜವಾಬ್ದಾರಿ ಹೊಂದಿರುತ್ತಾರೆ.
- ವಿಭಾಗದ ಕಂದಾಯ ಕಮಿಷನರ್ ಸ್ಥಾನದ ನಿಟ್ಟಿನಲ್ಲಿ, ವಿಭಾಗೀಯ ಕಮಿಷನರ್‌ರವರ ಕಾರ್ಯಗಳು

- ವಿಭಾಗೀಯ ಅಭಿವೃದ್ಧಿ ಕಮಿಷನರ್ ಸ್ಥಾನದ ನಿಟ್ಟಿನಲ್ಲಿ, ಕಮಿಷನರ್‌ರವರ ಪಾತ್ರ
- ಸಮನ್ವಯ ಮತ್ತು ಸಾರ್ವಜನಿಕ ಸಂಬಂಧಗಳು

3) ನಿಮ್ಮ ಉತ್ತರವು ಕೆಳಕಂಡ ಅಂಶಗಳನ್ನು ಒಳಗೊಂಡಿರತಕ್ಕದ್ದು:

- ವಿಭಾಗೀಯ ಕಮಿಷನರ್‌ರವರು ಸಮನ್ವಯವನ್ನು ಕೈಗೊಳ್ಳುತ್ತಾರೆ.
- ಅವರು ವಿಭಾಗದ ಸಮಸ್ಯೆಗಳ ಅರಿವನ್ನು ಹೊಂದಿರುತ್ತಾರೆ.
- ಕಲೆಕ್ಟರ್‌ಗಳ ಮೇಲ್ವಿಚಾರಣೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತಾರೆ.
- ರಾಜ್ಯ ಮಟ್ಟದ ನಿಯೋಜನೆಯನ್ನು ಪ್ರೋತ್ಸಾಹಿಸುತ್ತಾರೆ.

**ನಿಮ್ಮ ಪ್ರಗತಿಯನ್ನು ಪರಿಶೀಲಿಸಿ–2**

1) ನಿಮ್ಮ ಉತ್ತರವು ಕೆಳಕಂಡ ಅಂಶಗಳನ್ನು ಒಳಗೊಂಡಿರತಕ್ಕದ್ದು:

- ಕಂದಾಯ ಆಡಳಿತದ ಮುಖ್ಯಸ್ಥರಾಗಿ ಕಲೆಕ್ಟರ್‌ರವರ ಪಾತ್ರ.
- ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ಜಿಲ್ಲಾ ಕಲೆಕ್ಟರ್‌ರವರ ಪಾತ್ರ.
- ಅಭಿವೃದ್ಧಿಯ ನಿಟ್ಟಿನ ಆಡಳಿತದಲ್ಲಿ ಜಿಲ್ಲಾ ಕಲೆಕ್ಟರ್‌ರವರ ಪಾತ್ರ.

2) ನಿಮ್ಮ ಉತ್ತರವು ಕೆಳಕಂಡ ಅಂಶಗಳನ್ನು ಒಳಗೊಂಡಿರತಕ್ಕದ್ದು:

- ಕಲೆಕ್ಟರ್‌ರವರ ಕಛೇರಿಯಷ್ಟೇ ಅಲ್ಲದೆ, ವ್ಯವಸಾಯ, ಪಶು ಸಂಗೋಪನೆ, ಶಿಕ್ಷಣ ಇತ್ಯಾದಿ ಅನೇಕ ಇಲಾಖೆಗಳ ಉಪಸ್ಥಿತಿ.
- ಜಿಲ್ಲೆಗಳಲ್ಲಿ ವಿವಿಧ ಇಲಾಖೆಗಳಾದ ಕಂದಾಯ, ಪೊಲೀಸ್, ಪಂಚಾಯಿತಿ ರಾಜ್ ಸಂಸ್ಥೆಗಳು ಪ್ರತ್ಯೇಕವಾದ ಸಂರಚನೆಯನ್ನು ಹೊಂದಿವೆ.
- ದೇಶದಲ್ಲಿ ಜಿಲ್ಲಾಡಳಿತದ ಎರಡು ಮಾದರಿಗಳ ಹೊರಹೊಮ್ಮುವಿಕೆ. ಮೊದಲನೇ ಮಾದರಿಯಲ್ಲಿ ಗುಜರಾತ್ ಮತ್ತು ಮಹಾರಾಷ್ಟ್ರದಲ್ಲಿರುವಂತೆ, ಅಭಿವೃದ್ಧಿಪರ ಕಾರ್ಯಗಳಿಂದ ನಿಯಂತ್ರಣದ ಪ್ರತ್ಯೇಕೀಕರಣ. ಎರಡನೇ ಮಾದರಿಯಲ್ಲಿ, ರಾಜಾಸ್ಥಾನ ಮತ್ತು ಆಂಧ್ರಪ್ರದೇಶ

ರಾಜ್ಯಗಳಲ್ಲಿ ಕಂಡುಬರುವಂತೆ ಕಲೆಕ್ಟರ್‌ರವರು ನಿಯಂತ್ರಣ ಮತ್ತು ಅಭಿವೃದ್ಧಿಪರ ಕಾರ್ಯಗಳೆರಡರ ಉಸ್ತುವಾರಿಯನ್ನೂ ಹೊಂದಿರುತ್ತಾರೆ.

3) ನಿಮ್ಮ ಉತ್ತರವು ಕೆಳಕಂಡ ಅಂಶಗಳನ್ನು ಒಳಗೊಂಡಿರತಕ್ಕದ್ದು:

- ವಿಸ್ತೀರ್ಣ ಮತ್ತು ಜನಸಂಖ್ಯೆಗಳೆರಡನ್ನೂ ಆಧರಿಸಿದಂತೆ, ಜಿಲ್ಲೆಗಳ ಪ್ರಮಾಣದಲ್ಲಿ ಹೆಚ್ಚಿನ ವಿಭಿನ್ನತೆ.
- ಗ್ರಾಮಾಂತರ ಮತ್ತು ನಗರ ಸ್ಥಳೀಯ ಸಂಸ್ಥೆಗಳು ಅಭಿವೃದ್ಧಿಯ ನಿಟ್ಟಿನ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿನ ಅಸಮರ್ಥತೆ.
- ಕುಗ್ಗುತ್ತಿರುವ ಸಂಪನ್ಮೂಲದ ತಳಹದಿ, ಅಸಮರ್ಪಕ ತಾಂತ್ರಿಕ ಸಾಮರ್ಥ್ಯ, ಜನಸಂಖ್ಯೆಯ ವೃದ್ಧಿಯಿಂದ ಉಂಟಾದ ಒತ್ತಡದ ಹೆಚ್ಚಳ ಮುಂತಾಗಿ ಪುರಸಭಾ ಸ್ಥಳೀಯ ಸಂಸ್ಥೆಗಳು ಎದುರಿಸುತ್ತಿರುವ ಸಮಸ್ಯೆಗಳು.
- ನೀತಿ ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸುವ ನೌಕರಶಾಹಿಯ ಪ್ರವೃತ್ತಿಯು ವಿಳಂಬ, ಕೆಂಪುಪಟ್ಟಿ ಪದ್ಧತಿ ಮತ್ತು ಭ್ರಷ್ಟಾಚಾರಗಳಿಗೆ ದಾರಿ ಮಾಡುತ್ತದೆ.
- ಕಾನೂನು ಮತ್ತು ಸುವ್ಯವಸ್ಥೆಯ ಹದಗೆಡುವಿಕೆ ಮತ್ತು ಏಜೆನ್ಸಿಗಳ ನಡುವಿನ ಸಮನ್ವಯದ ಸಮಸ್ಯೆಗಳು.

***